Sri Mulka GOVINDA REDDY.—In the light of the recommendations of the Taxation Enquiry Commission, the Government of India may want to see unanimous legislation in this matter. . .

Sri Kadidal MANJAPPA.—That is a matter to be considered later on. It is too early to give a definite statement now.

Sri M. PALANIYAPPAN.—I want to know about the collection of octroi on handloom goods. The Hon'ble Minister has not touched upon that point.

Mr. SPEAKER.—The Minister has already stated what he has to say. I will put the Demand to vote. The question is :

> "That a sum not exceeding Rs. 17,40,000 be granted to the Government to defray the charges which will come in course of payment during the year ending 31st day of March 1956, in respect of 'Other Taxes and Duties'."

The motion was adopted.

DEMAND No. 14.—ADMINISTRATION OF JUSTICE.

27. ADMINISTRATION OF JUSTICE.

Mr. SPEAKER.—Motion moved:

"That a sum not exceeding Rs. 28,07,800 be granted to the Government to defray the charges which will come in course of payment during the year ending 31st day of March 1956 in respect of 'Administration of Justice'."

With regard to this Demand, we will take up according to the agreed decision, cut motions Nos. 16, 17, 20, 23, 27, 34, 37 and 40.

Sri M. MADIAH (Nanjangud—Scheduled Castes).—We will take up cut motion No. 33 also.

Mr. SPEAKER.—This is the agreed decision that is given to me.

Sri Mulka GOVINDA REDDY (Chitaldrug).—Sri Rachiah's cut motion is more comprehensive, Sir.

Mr. SPEAKER.—You can speak on this; as put by Sri Mulka Govinda Reddy, Sri Rachiah's cut motion is more comprehensive. You can speak on it.

Cut motion No. 16. Sri Panchakshariah. He is not present. Cut motion No. 17. Sri H. C. Linga Reddy.

Judiciary, separation from Executive.

Sri H. C. LINGA REDDY (Malur).—My cut motion is to discuss separation of the judiciary from the Executive and I would like to say a few words. I am glad that the Hon'ble Chief the Minister has already covered this point in his budget speech that the separation of the Judiciary from the Executive will be implemented within two or three months' time. I was only anxious to know the details of the scheme when I put down this cut motion for discussion here. The Chief Minister also made a statement while adressing the members of the Kolar Bar Association just four or five months ago regarding this. Again and again Hon'ble Sri A. G. Ramachandra Rao has also been reiterating that the scheme of separation of the judiciary from the executive would be very soon implemented. I hope that at least this time the Government will take full steps and implement this scheme. The principle is based on the point that the same person cannot both prosecute and sit in judgment. It is a cardinal principle in our Constitution and I hope, Sir, very shortly, without any delay, this time Government would implement the scheme of separation. After all, there are very few courts where we have revenue officers as presiding officers, and the Deputy Commissioners will have security powers to maintain law and order in the districts. The present First Class Magistrates and Sub-Judges can easily be District Magistrates and the scheme can be introduced without much expenditure.

With regard to the assurance, my friend Sri Pattabhiraman is reminding me that even in the last session an assurance had been given for the separation of the Judiciary from the Executive. Though there is an assurance in the budget speech of the Chief Minister, we rather feel diffident that it may take more time. We are sure that it will be introduced, but we do not know when and we wish it will be introduced sooner and quickly.

Payments to Copyists.

With regard to the cut motion No. 20, that I have tabled to discuss the necessity for arranging payment to copyists on the basis of copies written and remove the salary system as a result thereof, the principle that I have embodied in the cut motion was already in practice just four or five years back. This system was working well in those days. But there was an agitation on the part of the copyists that they should be paid salaries and not out of the fees collected based on the number of copies written by them. Unfortunately, the present state of payment of salaries is not working satisfactorily. The reason is that copyists are paid definite salaries and they are not attending to copying work

properly, and as expeditiously as they were doing formerly. Then it depended on the number of sheets written by them. But unfortunately since salary is given to them, they do not write properly or they are not doing their duty as they were doing formerly. My friend Sri Bheemappa Naik has been telling me that they are not attending to their work properly, and as a result the litigant public are put to a lot of difficulty and sometimes the litigant public do not get copies for months together, as the copyists do not show the same enthusiasm as they were formerly showing. It would be better if we return to the old system of paying them on the basis of copies written and not pay salaries. As a result of the present system, there is inordinate delay and both the clients and lawyers are suffering. Sometimes a lot of mischief takes place in supplying copies. For getting copies we have to approach the judicial officers, and these judicial officers will have to reprimand the copyists to get the copies. Therefore, I request the the Government to arrange to go back to the system of paying the copyists on the basis of preparation of copies and not pay salaries.

Administration of Justice, Re-organization.

ಶ್ರೀ ಪಿ. ಆರ್. ರಾಮಯ್ಯ (ಬನವನಗುಡಿ).— ನ್ಯಾಯವಿ, ಜನರಿಗೆ ಶೀಘ್ರವಾಗಿಯೂ ಹೆಚ್ಚು ಪೆಚ್ಚು ವಾಗದಂತೆಯೂ ನ್ಯಾಯವನ್ನು ದೊರಕಿಸಿಕೊಡುವ ದೃಷ್ಟಿಯಿಂದ ನ್ಯಾಯಾಂಗವನ್ನು ಪುನರ್ವ್ಯವಸ್ಥೆಗೊಳಿಸ ಬೇಕೆಂಬ ಉದ್ದೇಶದಿಂದ ನಾನು ಈ ಸೂಚನೆಯನ್ನು ತಂದಿರುವುದು. ಈ ಪ್ರೋತಾ ಸೂಚನೆಯಲ್ಲಿ ಅಡಕ ವಾಗಿರುವ ಅಭಿಪ್ರಾಯ ಸರ್ವೇ ಸಾಮಾನ್ಯವಾಗಿದೆ, ಯಾವಾಗಲೂ ನಮ್ಮ ಜನರು ಕೇಳತಕ್ಕ ವಿಷಯ ಏನೆಂ ದರೆ: ಈಗಿನ ನ್ಯಾಯ ವ್ಯವಸ್ಥೆ ಇಂಗ್ಲಿಷರು ನಮ್ಮ ದೇಶಕ್ಕೆ ಬಂದಮೇಲೆ ಜಾರಿಗೆ ತಂದದ್ದು. ಈ ನ್ಯಾಯಾಂಗ ವ್ಯವಸ್ಥೆಯಲ್ಲಿ Laws delays ಎನ್ನು ವುದು ಬಹಳ ಹೆಚ್ಚಾಗಿದೆ. ಆ ದೇಶದಲ್ಲಿಯೂ ಕೂಡ ಇತ್ತು, Laws delays ಎಂಬುದರ ಅರ್ಥವೇನಿದೆ ಎಂಬುದು ಷೇಕ್ಸ್‌ಪಿಯರ್ ನಾಟಕಗಳನ್ನೋದಿದವರಿಗೆ ಅರ್ಥವಾಗುತ್ತದೆ. ಇದು ನಾಗರಿಕ ಪ್ರಪಂಚವನ್ನೇ ಬಹಳ ತೊಂದರೆಗೆ ಈಡುಮಾಡತಕ್ಕದ್ದಾಗಿದೆ. ಇದನ್ನು ಪರಿಹಾರ ಮಾಡಬೇಕೆಂದು ಅನೇಕ ಸಾರಿ ಪ್ರಯತ್ನಗಳು ಇಂಗ್ಲೆಂಡಿನಲ್ಲಿಯೂ ನಡೆದಿವೆ. ನಮ್ಮ ದೇಶದಲ್ಲಿಯೂ ಇಂಡಿಯಾ ಸರ್ಕಾರದಲ್ಲಿ ಗೃಹಮಂತ್ರಿಗಳಾಗಿರುವ ಬಚ್ಚುರವರು ಈ ವಿಚಾರವನ್ನು ಪ್ರಸ್ತಾಪಮಾಡಿ ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಜನಸಾಮಾನ್ಯ ದೃಷ್ಟಿಯಿಂದ ಪುನರ್ವ್ಯವಸ್ಥೆ ಅತ್ಯಾ ವಶ್ಯಕ. ಆದರೆ ಅದನ್ನು ಯಾವ ರೀತಿ ಕಾರ್ಯರೂಪಕ್ಕೆ ತರಬೇಕೆಂದು ಸಲಹೆ ಕೊಡು ಎಂದು ನನಗೆ ಹೇಳಿದರೆ, ನಾನು ಪ್ರಾಜ್ಞನಲ್ಲ, ಈ ಸಭೆಯಲ್ಲಿ ಅನೇಕರಿದ್ದಾರೆ, ಯಾವ ರೀತಿ ನ್ಯಾಯ ನಿರ್ವಹಣೆ ಹೆಚ್ಚು ಖರ್ಚಿಲ್ಲದೆ ಸುಲಭವಾಗಿ ಆಗುತ್ತದೆ ಎಂಬ ಬಗ್ಗೆ ಸಲಹೆ ಕೊಡ ಬೇಕಾಗಿದೆ. ಜನ ಸಾಮಾನ್ಯರಲ್ಲಿ Justice delayed is justice denied ಎಂಬ ನಾಣ್ಣುಡಿ ಇದೆ. ಬಹಳ ದಿನಗಳಾದಮೇಲೆ ನ್ಯಾಯ ತೀರ್ಮಾನ ಕೊಟ್ಟರೆ ಅದರಿಂದ ಕೊಡದೇಯಿದ್ದರೆ ಎಷ್ಟು ಧಕ್ಕೆ ಯಾಗುತ್ತದೆಯೋ ಅಷ್ಟೇ ಧಕ್ಕೆ ಮನುಷ್ಯನಿಗಾಗು ತ್ತದೆ ಎಂಬುದು ಇದರ ಅರ್ಥ. ನಮ್ಮ ಕನ್ನಡದ ಲ್ಲಿಯೂ ಇಂಥ ಒಂದು ಮಾತಿದೆ. ಕೋರ್ಟುಗಳಿಗೆ ಹೋಗುವವರ ವಿಚಾರದಲ್ಲಿ. 'ಗೆದ್ದವನು ಸೋತ, ಸೋತವನು ಸತ್ತ' ಎಂದು ಹೇಳುತ್ತಾರೆ. ಇಂಥ ದುಷ್ಪರಿಣಾಮ ಅನೇಕ ಸಂದರ್ಭಗಳಲ್ಲಿ ಆಗಿದೆ. ಇದು ತಪ್ಪಬೇಕು. ಇದನ್ನು ಯಾವ ರೀತಿ ಮಾಡಬೇ ಕೆಂಬುದನ್ನು ಸ್ಥೂಲವಾಗಿ ಹೇಳುವುದಾದರೆ, ಒಂದು ವಿಷಯವನ್ನು ಹೇಳಬಹುದು. ನ್ಯಾಯಸ್ಥಾನಗಳು ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿಯೂ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿಯೂ ಇವೆ. ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಯೂ ಮುನ್ಸೀಫ್ ಕೋರ್ಟು ಗಳಿಲ್ಲ. ಆದಕಾರಣ ಹಳ್ಳಿಯ ಮನುಷ್ಯ ಬಹಳ ದೂರ ಬರಬೇಕಾಗಿದೆ. ಇದನ್ನು ತಪ್ಪಿಸಿ ಗ್ರಾಮಗಳಲ್ಲ ನ್ಯಾಯ ವ್ಯವಸ್ಥೆ ಮಾಡುವಂತೆ ಮಾಡಿದರೆ ಸುಲಭ ವಾಗುತ್ತದೆ. 'ನ್ಯಾಯ ಮಾಡುವುದು' ಎಂಬುದು ನಮ್ಮ ಹಳ್ಳಿಗಳಲ್ಲಿ ಪೊದಲನಿಂದಲೂ ನಡೆದುಕೊಂಡು ಬಂದಿದೆ. ಪೂರ್ವದಲ್ಲಿದ್ದಂತೆ ಗ್ರಾಮ ಪಂಚಾಯಿತಿ ಗಳಿಗೆ ಸಿವಿಲ್ ಮತ್ತು ಕ್ರಿಮಿನಲ್ ಪೊಕದ್ದಮೆಗಳ ವ್ಯವಹಾರಗಳನ್ನು ತೀರ್ಮಾನ ಮಾಡುವುದಕ್ಕೆ ಅವ ಕಾಶ ಮಾಡಿ ಕಾನೂನನ್ನು ಬದಲಾಯಿಸಿದರೆ ಸ್ವಲ್ಪ ಮಟ್ಟಿಗೆ ನಮ್ಮ ದೇಶದಲ್ಲಿ ನ್ಯಾಯ ಜನಕ್ಕೆ ಬೇಗ ಮತ್ತು ಸುಲಭ ಖರ್ಚಿನಲ್ಲಿ ದೊರಕಬಹುದೆಂದು ಕಾಣು ತ್ತದೆ. ಇಷ್ಟು ಹೇಳಿ, ಈ ವಿಚಾರವನ್ನು ಸಭೆ ಆಲೋಚನೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

2-30 P.M.

Writ Petitions before High Court.

* Sri Mulka GOVINDA REDDY.—My cut motion is to discuss the need of expediting the work in the High Court, especially matters pertaining to writ petitions. What I want to say will be an amplification of what Sri P. R. Ramaiya has already stated, namely 'Justice delayed is justice denied.' I would like to bring to the notice of this House that there were some writs pending before the High Court for a long time.

Sri M. PALANIYAPPAN (Ulsoor).—It amounts to contempt of court. He is discussing the delay and other things

(SRI M. PALANIYAPPAN.)

in the Court. Does it not amount to contempt of Court?

Mr. SPEAKER.—No, no.

Sri Mulka GOVINDA REDDY.—I have great respect for the judiciary and for the judges of the High Court. When I am speaking on this cut motion, let me tell the Members of this House that I have no intention of casting any aspersions on the judiciary and especially on the judges of the High Court. I would like to give an instance where justice is delayed and it has amounted to a denial of justice. With regard to admission of students to different technical and professional colleges in the State, especially Medical School, there was a hue and cry that there was great injustice done to the deserving students and some preferences were unduly shown. . . .

Mr. SPEAKER.—I just want to know from the Hon'ble Member whether that particular case which has referred to is pending before the High Court or not.

Sri Mulka GOVINDA REDDY.—It is pending.

Mr. SPEAKER.—Then, it is better that no reference is made to that.

Sri Mulka GOVINDA REDDY.—If the matter was decided earlier. . . ,

Sri M. PALANIYAPPAN.—I want a ruling from the Chair. Is this House competent to discuss about the delay either in a Court or High Court? Does it not amount to contempt of Court?

Sri A. G. RAMACHANDRA RAO (Mintster for Law and Education).—We cannot discuss pending cases.

Sri M. PALANIYAPPAN.—Without mentioning the names of the case, can we discuss?

Sri Mulka GOVINDA REDDY.—I do not want to enter into the merits of of the case. If that has been decided earlier, justice would have been made available to the parties. Further, I apprehend that this delay may be due to non-filling up of the vacancies in the Court. There are only four judges at present in the High Court. I do not know why the sixth Judge's place was not filled up earlier and why the vacancy caused by the retirement of Justice Mallappa was not also filled up though he retired some time in December. Another Judge is going to retire by the 20th of this month and the Chief Justice of Mysore is going to retire in the month of April. I would like to know why the delay is caused, whether it is due to the Government of Mysore or to the High Court of Mysore or the President of India. I do not know exactly where the delay is. My only anxiety is that vacancies must be filled up at the earliest and the High Court should function in full strength.

Appointment of Schedu'ed Caste Candidates as Munsiffs and Sub-Judges.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರಿ ನೌಕರಿಗಳಲ್ಲಿ ಪ್ರಾತಿನಿಧ್ಯವು ದೊರೆಯುದೇ ಇರುವ ಮತ್ತು ಸಾಕಾದಷ್ಟು ಮಟ್ಟಿಗೆ ಪ್ರಾತಿನಿಧ್ಯವು ದೊರೆಯುದೇ ಇರುವ ಕೋಮುಗಳಿಗೆ. . . .

Sri A. G. RAMACHANDRA RAO.—Cut motion Numbers 32, 33 and 34 relate to the Rules of Recruitment of Munsiffs about which a writ application is pending before the High Court. I submit, Sir, that it is not desirable to discuss these cut motions.

Sri M. MADIAH.—With regard to the point raised by the Hon'ble Minister without referring to the particular case or without entering into any particular case, Hon'ble Members may be kindly permitted to speak with regard to the rules framed in this behalf.

Sri A. G. RAMACHANDRA RAO.—I regret to so say that we cannot be surreptitious in our methods. Let us be clear and above board and let us be straightforward.

Sri Mulka GOVINDA REDDY.—We may discuss the need for appointmeng of Munsiffs and Sub-judges from amont the candidates belonging to unrepresented and inadequately represented communities.

Sri A. G. RAMACHANDRA RAO.—There is a further portion in the cut motion, namely, 'relaxing cretain rules in respect of those candidates.'

Sri Mulka GOVINDA REDDY.—The substance of the matter is the appointment of Munsiffs and Sub-judges from among the candidates belonging to

unrepresented and inadequately represented communities. He is not going to make any reference to the case that is pending before the High Court, but he will refer only to the subject-matter regarding the grant of adequate representation.

Mr. SPEAKER.—I think there is no harm. But he need not make a reference to the cases pending before the High Court.

ಶ್ರೀ ಬಿ. ರಾಚಯ್ಯ.—Later portionಗೆ refer ಮಾಡುವುದಿಲ್ಲ. "ಸರ್ಕಾರಿ ನೌಕರಿಯಲ್ಲಿ ಪ್ರಾತಿನಿಧ್ಯವು ದೊರೆಯುದೇ ಇರುವ ಮತ್ತು ಸಾಕಾದಷ್ಟು ಮಟ್ಟಿಗೆ ಪ್ರಾತಿನಿಧ್ಯವು ದೊರೆಯದೇ ಇರುವ ಕೋಮುಗಳಿಗೆ ಸೇರಿದ ಉಮೇದುವಾರರುಗಳ ಸಂಬಂಧದಲ್ಲಿ ಕೆಲವು ನಿಬಂಧನೆಗಳನ್ನು. . . .

ಅಧ್ಯಕ್ಷರು.—ಅದನ್ನು ಬಿಟ್ಟು ಬಿಡಿ.

ಶ್ರೀ ಬಿ. ರಾಚಯ್ಯ.—ಮುನ್ಸೀಫರುಗಳನ್ನಾಗಿಯೂ ಮತ್ತು ಸಬ್ ಜಡ್ಜ್‌ಗಳನ್ನಾಗಿಯೂ ನೇಮಕ ಮಾಡಬೇಕಾದ ಅವಶ್ಯಕತೆ ಇದೆ.

Sri A. G. RAMACHANDRA RAO.—It is better the member opposes the General Demand and speaks and does not speak on this particular cut motion.

Mr. SPEAKER.—You can speak afterwards.

Sri M. MADIAH.—If that is so, cut motion No. 32 may kindly be permitted, to be moved.

Mr. SPEAKER.—Yes, Sri M. Madiah may do so.

* ಶ್ರೀ ಎಂ. ಮಾದಯ್ಯ.—ಸ್ವಾಮಿ, ಈ ಸಭೆಯಲ್ಲಿ ಚರ್ಚೆಮಾಡಿ ತಮ್ಮ ತೃಪ್ತಿಗೋಸ್ಕರ ಮಾತನಾಡಬೇಕೆಂದು ಎದ್ದು ಮಾತನಾಡುತ್ತಾ ಇಲ್ಲ. ರಾಜ್ಯಾಂಗ ದಲ್ಲಿರತಕ್ಕಂಥ ಉದ್ದೇಶ ನಿಜವಾಗಿ ನೆರವೇರುತ್ತದೆಯೇ ಎನ್ನುವ ವಿಚಾರವನ್ನು ಮಾನ್ಯನಭೆಯ ಗಮನಕ್ಕೂ ಮತ್ತು ಸರಕಾರದ ಗಮನಕ್ಕೂ ತರುವುದಕ್ಕೋಸ್ಕರ ಹೇಳುತ್ತಿದ್ದೇನೆ. ಸ್ವಾಮಿ, ಈಗ Judicial Service ನಲ್ಲಿ ಮೈಸೂರು ಸಂಸ್ಥಾನದಲ್ಲಿ ಯಾರೂ ಸಹ Depressed Class ನವರು ಇಲ್ಲವೆಂಬುದು ತಮಗೆಲ್ಲಾ ಗೊತ್ತಿರುವ ವಿಚಾರ. ಆದರೆ ಇದಕ್ಕೆ ಯಾರೂ ಕಾರಣರಲ್ಲ ಎಂಬುದನ್ನು ನಾನು ಹೇಳುತ್ತೇನೆ. ಅವರಿಗೆ ಪ್ರಾರಂಭದಲ್ಲಿ ವಿದ್ಯೆ ಇಲ್ಲದೆ ಇದ್ದಕಾರಣದಿಂದಲೂ ಮೈಸೂರು ಸ್ಟೇಟಿನಲ್ಲಿ Law College ಇಲ್ಲದೆ ಹೊರಗೆಹೋಗುವುದಕ್ಕೆ ಚೈತನ್ಯವಿಲ್ಲದೆ ಇದ್ದುದರಿಂದಲೂ ಹಿಂದೆಯೇ Law degree ತೆಗೆದು ಕೊಂಡು Judicial serviceಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಮೈಸೂರಿನಲ್ಲಿ Law College ಆಗಿದೆ. ಮತ್ತು ಕೆಲವರಿಗೆ scholarship ಕೊಟ್ಟು ಇತರ ಕಡೆಗೆ ಹೋಗುವುದಕ್ಕೂ ಅವಕಾಶವಾಗಿದೆ...

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಇದನ್ನು ಹೆಚ್ಚಾಗಿ ದೀರ್ಘವಾಗಿ ಮಾತನಾಡುವುದಕ್ಕೆ ಮುಂಚೆ ಈ ಸಾರಿ ಅರ್ಜಿಗಳನ್ನು ಹಾಕಿದವರ ಪೈಕಿ Scheduled Castesಗೆ ಸೇರಿದವರಿಂದ ಎಷ್ಟು ಅರ್ಜಿಗಳು ಬಂದುವು ಎನ್ನುವುದನ್ನು ಹೇಳಬೇಕು.

ಶ್ರೀ ಎಂ. ಮಾದಯ್ಯ.—ಈ ಕಾಯಿದೆಗಳನ್ನು ಮಾಡುವಾಗ ಕೆಲವು ಅಲ್ಪ ಸಂಖ್ಯಾತರಲ್ಲಿ 4-6 ಜನರು ಇದ್ದರೂ ಸಹ ಅವರಿಗೆ ಅವಕಾಶ ದೊರೆಯುವ ರೀತಿಯಲ್ಲಿ ಮಾಡಿಲ್ಲವೆಂದು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಉದಾಹರಣೆ ಕೊಡುವುದಾದರೆ, ಗೌರ್ನ್‌ಮೆಂಟ್ ಆಫೀಸುಗಳಿಗೆ recruitment ಮಾಡುವಾಗ 30 ವರ್ಷ age limitನ್ನು Depressed Classಗೆ ಮಾಡಿದ್ದೀರಿ. ಮೊನ್ನೆತಾನೇ ಗೆಜೆಟ್ ನೋಡಿದ್ದೇನೆ. ಅದರಲ್ಲಿ Public Works Department ನಲ್ಲಿ Assistant Engineers ಗಳನ್ನು Probationer ಗಳಾಗಿ ತೆಗೆದುಕೊಳ್ಳುವುದಕ್ಕೆ Application call for ಮಾಡಿದ್ದಾರೆ. Depressed Class ನಲ್ಲಿ 35 ವರ್ಷ ವಯಸ್ಸಿನವರೂ ಇದ್ದಾರೆ, 30 ವರ್ಷ ವಯಸ್ಸಿನವರೂ ಇದ್ದಾರೆ. Depressed Class ನವರು ಕಾರಣಾಂತರದಿಂದ ಮನೆಗಳಲ್ಲಿ ಸೌಕರ್ಯವಿಲ್ಲದೆ ಸರ್ಕಾರದ ಸಹಾಯ ಸಕಾಲದಲ್ಲಿ ಇಲ್ಲದೆ ಕಾಲಮೀರಿದ ಮೇಲೆ ಪಾಸ್ ಮಾಡುವುದರಿಂದ ಅವರಿಗೆ ಸ್ವಲ್ಪ handicap ಆಗಿದೆ. ಆದ್ದರಿಂದ 4-6 ವರ್ಷಗಳಾದರೂ ಹೆಚ್ಚಿಗೆ ಅವಕಾಶ ಕೊಡಬೇಕು. Judicial Serviceಗೆ ಸೇರಬೇಕಾದರೆ Munsiff examinationಗೆ ಕುಳಿತುಕೊಳ್ಳಬೇಕಾದರೆ ಅರ್ಜಿಹಾಕತಕ್ಕಂಥವನಿಗೆ 30 ವರ್ಷವೆಂದಿದೆ. ಎಲ್ಲದರಲ್ಲೂ exception ಇದೆ. ಆದರೆ with regard to Scheduled Classes, there is no exception. All are Depressed Classes and Backward Communities and these are to be in the same class. "In the case of Scheduled Classes, not more than 40 years." ಎಂದು ಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏತಕ್ಕೆಂದರೆ ಅವರು Judicial Service ನಲ್ಲಿರುವವರ ಪಟ್ಟಿತರಿಸುವಾಗ Depressed Class ಉಮೇದುವಾರರ ವಿಚಾರದಲ್ಲಿ 40 ವರ್ಷಗಳಾಗಿದ್ದರೂ ಪರವಾಗಿಲ್ಲ ಎಂದು ಮಾಡಬೇಕೆಂದು ಹೇಳುತ್ತೇನೆ. Articles 234 ವ ತ್ತು 309 ರಲ್ಲಿ ರಾಜಪ್ರಮುಖರಿಗೆ ಇರತಕ್ಕಂಥ powers ಗಳನ್ನು ಪ್ರಸ್ತಾಪಿಸಿದ್ದಾರೆ. ಅವರಿಗೆ Optional powers ಇದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಆದ್ದರಿಂದ ಅವರು ಅದನ್ನು restrict ಮಾಡಬಹುದು. Rule 10-11 ವಿಚಾರವಾಗಿ Rule 17 (iv) ರಲ್ಲಿ ಹೀಗೆ ಹೇಳಿದ್ದಾರೆ "The Rajpramukh may relax all or any of these rules in regard to candidates belonging to Backward Communities or Scheduled Castes or Scheduled Tribes, subject, however, to their possessing the qualifications prescribed in rules 10 and 11 above" ಆದ್ದರಿಂದ ಯಾವ ರೂಲಿನಲ್ಲಿ ಅಡ್ಡಿ ಆತಂಕಗಳಿವೆಯೋ ಅವುಗಳನ್ನೆಲ್ಲಾ relax ಮಾಡಬಹುದು; ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. Rule 10 ರಲ್ಲಿ age limit ವಿಚಾರ ಹೇಳಿದ್ದಾರೆ. ಅದು ಹೀಗಿದೆ.

Rule 10 says.—

"Age limit—A candidate must not have completed the age of 35 years on the 1st day of January next following the date of commencement of the examination subject to the Proviso in Rule 16."

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—On a point of Order. ಪೊಲ್ಟಪೊದಲು ಶ್ರೀಮಾನ್ ರಾಚಿಯ್ಯನವರು ಮಾತನಾಡುವಾಗ ಇದೇ ರೂಲ್‌ಗಳ ವಿಷಯದಲ್ಲಿ ಮಾತನಾಡ ಕೂಡದು ಎಂದು ತಮ್ಮ ಅಪ್ಪಣೆ ಆಗಿತ್ತು. ಆದರೆ ಈಗ ತಾನೇ ಮಾತನಾಡಿದ ಶ್ರೀ ಮಾದಯ್ಯನವರು ಇದೇ ವಿಷಯದಲ್ಲಿ ಮಾತನಾಡುತ್ತಾ ಇರುವುದರಿಂದ ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಬೇಕು.

Sri M. MADIAH.—Am I not entitled to speak without making any reference to any court ?

Mr. SPEAKER.—I think there is some contention regarding that particular point. Therefore, it is better to leave aside that point and speak in a general way.

ಶ್ರೀ ಎಂ. ಮಾದಯ್ಯ.—ಆಗಬಹುದು. ಆದ್ದರಿಂದ Depressed Class ವಿಚಾರದಲ್ಲಿ ಹೆಚ್ಚಾಗಿ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಹೇಳುತ್ತೇನೆ. ಮತ್ತು Judicial Service ನಲ್ಲಿ ಇರತಕ್ಕಂಥ ಸೌಕರರ ಪಟ್ಟಿಯನ್ನು ತರಿಸುವಾಗ, Judicial ಸರ್ವಿಸ್‌ನಲ್ಲಿ ಇರುವವರನ್ನು ಮಾತ್ರ ಅದರಲ್ಲಿ ಸೇರಿಸಬೇಕೆಂದು ಇದೆ. ಆದೇ ರೀತಿ Depressed Classಗೆ ಸೇರಿದವರು ಈಗ Law Department ನಲ್ಲಿಯೂ ಕೆಲಸ ಮಾಡುವವರಿದ್ದರೆ ಅವರನ್ನೂ ಆ ಪಟ್ಟಿಯಲ್ಲಿ ಸೇರಿಸಿದರೆ ಅದು ತಪ್ಪಾಗುವುದಿಲ್ಲ. ಆದ್ದರಿಂದ Judicial ಇಲಾಖೆಯಲ್ಲಿ ಮತ್ತು Law department ನಲ್ಲಿ ಇರುವವರ ಹೆಸರುಗಳನ್ನು ಸೇರಿಸುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಹೇಳುತ್ತೇನೆ.

ಈ ರೀತಿ ನಾನು ಹೇಳಿದ ಹಾಗೆ ರಾಜಪ್ರಮುಖರಿಗೆ Rules ಮಾಡುವ ಸರ್ವಾಧಿಕಾರವಿದ್ದರೂ ಕೂಡ ಡಿಪ್ರೆಸ್ಡ್ ಕ್ಲಾಸಿನವರಿಗೆ ಉತ್ತೇಜನ ಕೊಡುವಬಗ್ಗೆ ಹೆಚ್ಚಿಗೆ concessions ಕೊಡುವಂತೆ ಮಾಡುವುದು ಅತ್ಯಾವಶ್ಯಕ. ಹಾಗೆನಮಗೆ concessions ತೋರಿಸಿ, ಇನ್ನೂ ಏನಾದರೂ ಅಡ್ಡಿ ಆತಂಕಗಳಿದ್ದರೆ ಅದರ ನಿವಾರಣೆಗೂ ಶಕ್ತ ಏರ್ಪಾಡುಮಾಡಿ, ಆದಷ್ಟು ಜಾಗ್ರತೆ ಕೆಲವರಿಗಾದರೂ ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಪರೀಕ್ಷೆಗಳನ್ನು ಮಾಡುವುದರಲ್ಲೇ ಆಗಲಿ, ಪಟ್ಟಿಯನ್ನು ನೋಡಿದರೆ, ಡಿಪ್ರೆಸ್ಡ್ ಕ್ಲಾಸಿನವರು ಯಾರೂ ಇಲ್ಲ. ಇದನ್ನು ಗಮನಿಸಿ ಇವರಿಗೂ ಅವಕಾಶವಾಡಿ ಕೊಡಬೇಕಾದದ್ದು ಅವಶ್ಯಕ. ಮುಖ್ಯವಾಗಿ ರಾಜ್ಯಾಂಗದಲ್ಲಿ ಹೇಳಿರುವ ವಾಕ್ಯಗಳ spirit (ತತ್ವ) ಏನೆಂಬುದನ್ನು ಅರಿತು ತಾವು ಕೆಲಸಮಾಡಬೇಕು. ನಮ್ಮ ಜನರಲ್ಲಿ ಸ್ವಲ್ಪಮಟ್ಟಿಗೆ ಲೋಪವಿದ್ದರೂ ಕೂಡ, ಅದನ್ನು ಗಣನೆಗೆ ತೆಗೆದುಕೊಳ್ಳದೆ ರಿಯಾಯಿತಿ ತೋರಿಸಬೇಕೆಂಬುದೇ ರಾಜ್ಯಾಂಗದ ಉದ್ದೇಶ. ನಿಮ್ಮ ತರಗತಿಯ ಪ್ರತಿನಿಧಿಗಳು ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಅದನ್ನು ಪರಿಶೀಲನೆಮಾಡಿ ರಾಜಪ್ರಮುಖರಿಗೆ ಕಳುಹಿಸಿಕೊಟ್ಟು ಡಿಪ್ರೆಸ್ಡ್ ಕ್ಲಾಸಿನವರೂ ಸರ್ವಿಸ್ಸಿಗೆ ಬರುವಂತೆ ಅವಕಾಶಮಾಡಿ ಕೊಡಬೇಕೆಂದು ಹೇಳುತ್ತೇನೆ.

Depositions in courts to be in Kannada.

ಶ್ರೀ ಜಿ. ನಾರಾಯಣಗೌಡ (ಮುಳಬಾಗಿಲು—ಶ್ರೀನಿವಾಸಪುರ).—ಸ್ವಾಮಿ, ನನ್ನ ಈ ಪ್ರೇತಾ ನಿರ್ಣಯ, 'ಸಂಸ್ಥಾನದ ಎಲ್ಲಾ ಕೋರ್ಟುಗಳಲ್ಲಿಯೂ ಸಾಕ್ಷ್ಯವನ್ನು ಕನ್ನಡದಲ್ಲಿ ತೆಗೆದುಕೊಂಡು ಕನ್ನಡದಲ್ಲಿ ಓದಿಹೇಳುವ ಯುಕ್ತತೆಯ ವಿಚಾರದಲ್ಲಿ ಚರ್ಚೆ ನಡೆಸುವುದಕ್ಕಾಗಿ' ತಂದಿದ್ದೇನೆ. ಈಗ ನಮ್ಮ ಸಂಸ್ಥಾನದ ಕೋರ್ಟುಗಳಲ್ಲಿ ಸಾಕ್ಷಿಗಳು ಕನ್ನಡದಲ್ಲಿ ಹೇಳಿದ್ದನ್ನು ಇಂಗ್ಲೀಷಿನಲ್ಲಿ ಬರೆದುಕೊಂಡು ಅದನ್ನೇ ಓದಿ ಸಾಕ್ಷಿಗೆ ತಿಳಿಸಲಾಗಿದೆಯೆಂದು ಬರೆದು ಕೊಳ್ಳುತ್ತಾರೆ. ನಮ್ಮಲ್ಲಿ ಸಾಧಾರಣವಾಗಿ ಬಹಳ ಜನಗಳಿಗೆ ಇಂಗ್ಲೀಷು ಗೊತ್ತಿಲ್ಲವೆಂಬುದು ನಮ್ಮೆಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಇಂಗ್ಲೀಷ್ ತಿಳಿದಿರುವವರು ಕೋರ್ಟಿಗೆ ಹೋಗಿದ್ದರೆ, ಅವರ ಸಾಕ್ಷ್ಯವನ್ನು ಬೇಕಾದರೆ ಇಂಗ್ಲೀಷಿನಲ್ಲಿ ತೆಗೆದುಕೊಂಡು ಹೇಳುವುದು ಸರಿಯಾಗಿ ಕಾಣುತ್ತದೆ. ಹಾಗಿಲ್ಲದೆ ಇಂಗ್ಲೀಷ್ ತಿಳಿಯದಿರುವವರಿಗೆ ಭಾಷಾಂತರಮಾಡಿ ಹೇಳುವುದೆನ್ನುವುದು ಅನೇಕ ಲೋಪದೋಷಗಳಿಂದ ಕೂಡಿದ್ದಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಕನ್ನಡದಲ್ಲಿ ಹೇಳಿದ್ದನ್ನು ತರ್ಜುಮೆಮಾಡಿ ಬರೆದುಕೊಳ್ಳುವುದರಲ್ಲೂ ತಪ್ಪುಗಳು ಕಂಡು ಬರುತ್ತವೆ. ಇದೇ ವಿಷಯ ನಭೆಯ ಮುಂದೆ ಅನೇಕ ಸಾರಿ ಬಂದಿದೆ. ಇಷ್ಟಾದರೂ ಇನ್ನೂ ಏಕೆ ಸರ್ಕಾರದವರು ಇದನ್ನು ಜಾರಿಗೆ ತರಲು ಮನಸ್ಸುಮಾಡಿಲ್ಲವೋ ಗೊತ್ತಿಲ್ಲ. ಇದು ಸಾಧ್ಯವೂ ಇದೆ, ಸುಲಭವೂ ಆಗಿದೆ. ಇನ್ನಾದರೂ ಸರ್ಕಾರದವರು ಬೇಗ ಕಾರ್ಯಗತಮಾಡಬೇಕೆಂದು ಹೇಳುತ್ತೇನೆ.

Grant in-aid to Civil Station Bar Association.

Sri M. PALANIYAPPAN (Ulsoor).—I beg to move the cut motion. It runs as follows :

Mr. SPEAKER.—You need not move the cut motion.

*Sri M. PALANIYAPPAN.—Sir, Civil Station Bar Association I just want to bring to the notice of the Government that the Civil Station Bar Association is a very old institution existing from a very long time. The Civil Station has got a very good Bar Association and eminent lawyers were members of that Bar. Sir, when the courts of the Civil Station shifted from the present D. I. G.'s compound, *i.e.*, from the Infantry Road to the present Mayo Hall, the then I. G. P. in anticipation of the orders of Government removed all the furniture and threw them actually out, not only the articles of the Bar but also of the court, and even demolished and broke the furniture. At present the association is running almost without any furniture articles, except a few broken chairs here and there. Sir, the strength of the Bar is increasing day

by day because of the increase in the number of cases and also of the candidates coming out of the Law College. The activities of the Association has also been increasing. Our Hon'ble the Chief Minister was good enough to sanction Rs. 10,000 to the City Bar Association. If you see the activities of the Civil Station Bar, it is in no way inferior to the City Bar Association. As such, I feel, Sir, it is necessary that the Government should allot some sum to that Association also.

Sir, recently, I have seen in the newspaper that one Mr. K. T. Sitaramaiah has been appointed as Government Pleader. In this connection, I would like to draw the attention of the Government that there were many eminent laywers; I have no personal hatred towards him, he is my good friend and a best friend I can say, but the members of the Bar Association were not consulted while appointing him as a Government Pleader. Sir, the Government Pleader has been brought from the City. There are many persons appointed as Public Prosecutors from the City Bar.

Sri A. BHEEMAPPA NAIK.—Sir, he is condemning the action of the Government about the appointment of the Government Pleader.

Sri M. PALANIYAPPAN.—I am not condemning, Sir. I am representing my grievances that the Bar of the Civil Station has not been consulted by the Government while making appointment.

Sri A. G. RAMACHANDRA RAO.—For appointment of Pleaders, we need not consult the Bar Association.

Sri M. PALANIYAPPAN.—I would request the Government to take into consideration the merits of the Bar Association and there are members of the Bar, and they should be consulted while making such appointments. Further, Sir, I request the Government to kindly see that that a sum of Rs. 10,000 may be sanctioned to start a library and to have good furniture. There are no books for consultation in the Bar Association whereas in the City Bar we find a number of books. There is no accommodation for the clients to sit in the Court. Clients will have to remain outside while the cases are going on.

I would earnestly request the Government to kindly sanction the amount for the improvement of the library and provide furniture articles to the Civil Station Bar Association.

Mr. SPEAKER.—Mr. Rachaiah will have his say now because he was on his legs then.

Representation of unrepresented classes in cadres of Judicial Department.

ಶ್ರೀ ಬಿ. ರಾಚಯ್ಯ.—ಸ್ವಾಮಿ, ನ್ಯಾಯಾಂಗದಲ್ಲಿ ಹೆಚ್ಚಿಗೆ ಪ್ರಾತಿನಿಧ್ಯವಿಲ್ಲದಿರುವ ಅಥವಾ ಕಡಮೆ ಪ್ರಾತಿನಿಧ್ಯ ವಿರತಕ್ಕ ಕೋಮುಗಳಿಗೆ ನೇರಿದಂಥ ಉಪೇಂದ್ರು ವಾರರನ್ನು ಮುನ್ಸೀಫರಾಗಿಯೂ, ಜಡ್ಜ್ ಮತ್ತು ಸಬ್‌ಜಡ್ಜಿಗಳಾಗಿಯೂ ತೆಗೆದುಕೊಳ್ಳುವ ಸಂದರ್ಭದಲ್ಲಿ ಅವರಿಗೆ ಇರತಕ್ಕ ಕೆಲವು ನ್ಯೂನತೆಗಳನ್ನು ತೆಗೆದು ನೇಮಕ ಮಾಡಿಕೊಳ್ಳಬೇಕೆಂದು ಹೇಳಿ ನಾನು ಸರ್ಕಾರದವರಿಗೆ ಅರಿಕೆಮಾಡಿಕೊಳ್ಳಬಯಸುತ್ತೇನೆ. ಹೀಗೆ ಹೇಳುವಾಗ, ನಾನು ನ್ಯಾಯಾಂಗದ ಆಡಳಿತದ ವಿಷಯದಲ್ಲಿ ಕುಂದುಂಟಾಗುವಂತೆ ದಕ್ಷತೆಯಿಲ್ಲದಿರುವವರನ್ನಾಗಲಿ, ಅನುಭವಿಗಳನ್ನಾಗಲಿ ತೆಗೆದುಕೊಂಡು ಆಡಳಿತ ದಕ್ಷತೆಯನ್ನು ಕಡಮೆ ಮಟ್ಟಕ್ಕೆ ತರಬೇಕೆಂಬ ಉದ್ದೇಶಪಡುತ್ತಿಲ್ಲ. ಈ ಪ್ರಾತಿನಿಧ್ಯವಿಲ್ಲದಿರುವ ಕೋಮುಗಳಲ್ಲೂ ಕೂಡ ಒಂದೆರಡು ನ್ಯೂನತೆಗಳೇನೋ ಇದ್ದರೂ, ದಕ್ಷರಾಗಿರುವವರು, ಅನುಭವಿಗಳು ಅನೇಕರಿದ್ದಾರೆಂಬುದು ಸರ್ಕಾರದವರಿಗೂ ಮಾನ್ಯ ಸದಸ್ಯರಿಗೂ ಗೊತ್ತಿರುವ ವಿಷಯವಾಗಿದೆ. ಮೈಸೂರು ಸಂಸ್ಥಾನಗಳಲ್ಲಿರತಕ್ಕ ನ್ಯಾಯಾಧೀಶರುಗಳ, ಪಬ್ಲಿಕ್ ಪ್ರಾಸಿಕ್ಯೂಟರುಗಳ ಮತ್ತು ಮುನಿಸೀಫರುಗಳ ಸಂಖ್ಯೆಯನ್ನು ಬಡ್ಜೆಟ್ಟಿನ (Vol. 1) 222ನೆಯ ಪುಟದಲ್ಲಿ ಕಾಣಬಹುದು. ಹೈಕೋರ್ಟಿನಲ್ಲಿ ಆರು ಜನ ನ್ಯಾಯಾಧೀಶರಿದ್ದಾರೆ, ಒಬ್ಬರು ಅಡ್ವೊಕೇಟ್ ಜನರಲ್ಲರು, ಪಬ್ಲಿಕ್ ಪ್ರಾಸಿಕ್ಯೂಟರು ಮತ್ತು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರು 16 ಜನ, ಡಿಸ್ಟ್ರಿಕ್ಟ್ ಜಡ್ಜಿಗಳು 11, ಸಬ್ ಜಡ್ಜಿಗಳು 8 ಮತ್ತು ಮುನ್ಸೀಫರುಗಳು 33 ಜನ—ನ್ಯಾಯಾಂಗ ಶಾಖೆಯಲ್ಲಿದ್ದಾರೆಂದು ಗೊತ್ತಾಗುತ್ತದೆ. ಇಷ್ಟು ಜನರಲ್ಲಿ ಹಿಂದುಳಿದ ಕೋಮಿನವರು ಯಾರೂ ಇಲ್ಲ; ನಿಮ್ಮ ತರಗತಿಯವರಾಗಿ ಒಬ್ಬರು ಮಾತ್ರ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದಾರೆ. ಇತ್ತೀಚೆಗೆ ಇವರನ್ನಾದರೂ ಒಬ್ಬರನ್ನು ನೇಮಿಸಿಕೊಂಡದ್ದಕ್ಕೆ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಮಾನ್ಯ ಸದಸ್ಯರು ಬಿ.ಎ., ಎಲ್.ಎಲ್.ಬಿ. ಮಾಡಿದ್ದಾರೆಂದು ಹೇಳಿ ಮಂತ್ರಿಗಳಾಗುವುದಕ್ಕೆ ಅಪೇಕ್ಷೆಪಡುವುದರಲ್ಲೇನೂ ಅಭ್ಯಂತರವಿಲ್ಲ. ಆದರೆ ಕೆಲಸ ಹೇಗೆ ನಡೆಯಬೇಕು!

ಶ್ರೀ ಬಿ. ರಾಚಯ್ಯ.—ಹಿಂದುಳಿದ ವರ್ಗದವರು ಪ್ಲೈಕಿ ಲಾ-ಡಿಗ್ರಿ ತೆಗೆದುಕೊಂಡಿರುವವರೆಲ್ಲರೂ ಇಲ್ಲಿಗೆ ಅಸೆಂಬ್ಲಿ ಮೆಂಬರಾಗಿ ಬಂದಿಲ್ಲ!

(ಶ್ರೀ ಬಿ. ಗಾಚಯ್ಯ.)

ಈಗಲೂ ನಮ್ಮವರಲ್ಲಿ ಕೋರ್ಟಿನಲ್ಲಿ ಪ್ರಾಕ್ಟಿಸ್ ಮಾಡತಕ್ಕ ಅಡ್ವೊಕೇಟುಗಳೂ ಕೆಲವರಿದ್ದಾರೆ. ಲೆಜಿಸ್ಲೇಟಿವ್ ಸೆಕ್ರಟೇರಿಯಟ್ಟಿನಲ್ಲಿ, ಲಾ-ಸೆಕ್ರಟೇರಿಯಟ್ಟಿನಲ್ಲಿ ಮತ್ತು ಜುಡಿಷಿಯರಿನಲ್ಲಿ ಕೆಲಸ ಮಾಡುವವರು ನಮ್ಮ ಪಂಗಡಕ್ಕೆ ಸೇರಿದವರು ಎಷ್ಟೋ ಜನರಿದ್ದಾರೆ. ಕಾರಣಾಂತರದಿಂದ ಇವರುಗಳು ಕೋರ್ಟುಗಳಲ್ಲಿ ಕೆಲಸಮಾಡಲು ಕಷ್ಟವಾಗಿ ಸರ್ಕಾರಿ ನೌಕರಿಯಲ್ಲಿ ಸೇರಿಕೊಂಡಿರುತ್ತಾರೆ ಅಷ್ಟೆ. ಕೆಲವರಿಗೆ ವಯಸ್ಸು ಜಾಸ್ತಿಯಾಗಿರುತ್ತದೆಯಾದರೂ ಕೋರ್ಟಿನಲ್ಲಿ ಕೆಲವಾರು ವರ್ಷಗಳಿಂದ ಲಾಯರಾಗಿಯೋ ಅಡ್ವೊಕೇಟರಾಗಿಯೋ ಕೆಲಸಮಾಡುತ್ತಿದ್ದಾರೆ. ಇವರುಗಳನ್ನು ಜಡ್ಜರಾಗಿ ತೆಗೆದುಕೊಳ್ಳಲು ಬೇರೆ ರೀತಿಯಲ್ಲಿ ದಕ್ಷತೆಯಿದ್ದರೂ ಕೆಲವು ನ್ಯೂನತೆಗಳ ವಿಷಯದಲ್ಲಿ ರಿಯಾಯಿತಿ ಕೊಡಬೇಕಾಗಿರುತ್ತದೆ. ಆ ನ್ಯೂನತೆಗಳನ್ನು ತೆಗೆದು ಇವರುಗಳನ್ನು ನೇಮಿಸಿಕೊಂಡಲ್ಲಿ ಅವರೂ ಚೆನ್ನಾಗಿ ಕೆಲಸ ನಿರ್ವಹಿಸಬಲ್ಲರು. ಈಗ ಕೆಲವು ವರ್ಷಗಳ ಹಿಂದೆ ನಮ್ಮವರೊಬ್ಬರನ್ನು ಪಬ್ಲಿಕ್ ಪ್ರಾಸಿಕ್ಯೂಟರಾಗಿ ತೆಗೆದುಕೊಂಡಿದ್ದೀರೆಂದು ಗೊತ್ತಾಗಿದೆ. ಅವರು ಚೆನ್ನಾಗಿ ಕೆಲಸಮಾಡುತ್ತಿದ್ದಾರೆಂದೂ ಗೊತ್ತಾಗಿದೆ. ಅದೇ ರೀತಿ ನಮ್ಮಲ್ಲಿರುವ ಇನ್ನೂ ಇತರ ಬಿ.ಎ., ಎಲ್.ಎಲ್.ಬಿ. ಮಾಡಿರುವವರನ್ನು ನೇಮಿಸಿಕೊಂಡರೆ ಅವರೂ ತಮ್ಮ ನಿರೀಕ್ಷೆಯಂತೆ ಕೆಲಸ ಮಾಡಬಲ್ಲರೆಂದು ಹೇಳಬಹುದು. ಆದ್ದರಿಂದ ಅಡಳಿತ ದಕ್ಷತೆಗೆ ಕುಂದು ಬಾರದ ರೀತಿಯಲ್ಲಿ ನೋಡಿಕೊಂಡು, ಯಾವ ಯಾವ ಕೋಮುಗಳಿಗೆ ನ್ಯಾಯಾಂಶವಲ್ಲ ಇನ್ನೂ ಸಾಕಾದಷ್ಟು ಪ್ರಾತಿನಿಧ್ಯ ದೊರಕಿಲ್ಲವೋ ಅವುಗಳಿಗೆ ಪ್ರಾತಿನಿಧ್ಯ ಕೊಡುವುದಕ್ಕಾಗಿ ಕೆಲವು ನ್ಯೂನತೆಗಳನ್ನು ತೆಗೆದು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಪ್ರಾತಿನಿಧ್ಯ ಕೊಡುವುದರಲ್ಲಿ, ಮಾನ್ಯ ಶಿವಪ್ಪನವರು ಹೇಳಿದಹಾಗೆ, ಹಿಂದೆ ಅಸೆಂಬ್ಲಿ ಸದಸ್ಯರಾಗಿರತಕ್ಕವರನ್ನೂ ಕೂಡ ಜಡ್ಜಿಗಳಾಗಿ ತೆಗೆದುಕೊಂಡಿದ್ದೀರಿ. ಆದ್ದರಿಂದ ಅಸೆಂಬ್ಲಿ ಮೆಂಬರುಗಳಾದರೂ ಇಷ್ಟಪಟ್ಟರೆ ಹೋಗಬಹುದು. ಒಟ್ಟಿನಲ್ಲಿ ಯಾರುಯಾರಿಗೆ ಇದುವರೆಗೂ ನ್ಯಾಯಾಂಗದಲ್ಲಿ ಹೆಚ್ಚಿನ ಪ್ರಾತಿನಿಧ್ಯ ದೊರಕಿಲ್ಲವೋ ಅವರ ವಿಷಯದಲ್ಲಿ ಕೆಲವು ವಿಷಯಗಳಲ್ಲಿ ರಿಯಾಯಿತಿ ತೋರಿಸಿ ನ್ಯಾಯಾಧೀಶರಾಗಿಯೂ, ಪಬ್ಲಿಕ್ ಪ್ರಾಸಿಕ್ಯೂಟರುಗಳಾಗಿಯೂ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, untouchability ಸಂಬಂಧದಲ್ಲಿ ಬರತಕ್ಕ ಕೇಸುಗಳ ವಿಷಯದಲ್ಲಿ ಅವರ ಪರವಾಗಿ ವಾದ ನಡೆಸಲು ಸರ್ಕಾರದವರ ಒಬ್ಬ ಫ್ಲೀಡರನ್ನು ನೇಮಕಮಾಡಿಕೊಟ್ಟು ಉಚಿತ ರೀತಿಯಲ್ಲಿ ಕೇಸುಗಳನ್ನು ನಡೆಸಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The House will now rise for lunch and meet again at **3-30 P.M.**

The House adjourned for lunch at Three of the Clock and met again at Thirty Minutes past Three of the Clock.

[MR. SPEAKER in the Chair].

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಈ ಪ್ರೋತಾ ನಿರ್ಣಯದಲ್ಲಿ ಸೂಚಿಸಿರುವುದನ್ನು ನೋಡಿದರೆ ಈ ಹಿಂದೆ ಈ ಕಾಪಿಯನ್ನುವರುಗಳಿಗೆ ಅವರು ದಿನವಹಿ ಎಷ್ಟೆಷ್ಟು ಷೀಟುಗಳನ್ನು ಬರೆದುಕೊಡುತ್ತಿದ್ದರೋ ಅದರಮೇಲೆ ಲೆಕ್ಕಹಾಕಿ ಅವರಿಗೆ ಫೀಜನ್ನು ಕೊಡುತ್ತಿದ್ದಂಥ ಒಂದು ಪದ್ಧತಿ ಜಾರಿಯಲ್ಲಿತ್ತು. ಆದರೆ ಈಗ ಈ ವಿಚಾರದಲ್ಲಿ ಅವರಿಗೆ ಸಾಕಷ್ಟು ಸಂಬಳ ಸಾರಿಗೆಗಳನ್ನೂ ಕೊಡುವಂತೆ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬುದಾಗಿ ಆ ಕಾಪಿಯಿಸ್ಟರುಗಳಿಂದ ಸರ್ಕಾರಕ್ಕೆ ಒಂದು ಮನವಿ ಸಹ ಬಂದಿರುವುದಾಗಿ ನಾನು ಕೇಳುತ್ತೇನೆ. ಆದರೆ ಹಾಗೆ ಅವರು ಸರ್ಕಾರಕ್ಕೆ ಬರೆದುಕೊಂಡಿರುವ ಮನವಿಯಲ್ಲಿ ಏನಿರುತ್ತದೆ ಅಂದರೆ—"ಈಗ ಹಾಲಿಯಿರತಕ್ಕಂಥ ಪದ್ಧತಿಯು ಸರಿಯಾಗಿಲ್ಲ, ಇದರಿಂದ ನಮ್ಮ ಜೀವನಕ್ಕೆ ಸಾಕಾಗುವಷ್ಟು ದುಡ್ಡು ಸಿಕ್ಕುವುದಿಲ್ಲ. ಆದುದರಿಂದ ಈ ಪದ್ಧತಿಯನ್ನು ತಪ್ಪಿಸಿ, ಒಂದು ಸಂಬಳವನ್ನು ಗೊತ್ತುಮಾಡಿ, ಸರ್ಕಾರದವರು ನೇರವಾಗಿ ಇವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕು" ಎಂದು ಅವರು ಕೇಳಿಕೊಂಡಿದ್ದರು. ಅದರಂತೆಯೇ ಇತ್ತೀಚೆಗೆ ಸರ್ಕಾರದವರು ಅವರಿಗೆ ಸಂಬಳ ಕೊಡುತ್ತಾ ಬಂದರು. ಆದರೆ ಇತ್ತೀಚೆಗೆ ಆ ಕಾಪಿಯಿಸ್ಟರುಗಳು ಕೊಟ್ಟಿರುವಂಥ ಮನವಿಯಲ್ಲಿ ಸರ್ಕಾರದವರು ಕೊಡತಕ್ಕ ಸಂಬಳ ಸಾರಿಗೆ ಸಾಲದು ಎಂದಿದೆ. ಆದರೆ ಹಾಗೆ ಸರ್ಕಾರದವರು ಈ ದಿವಸ ಅವರಿಗೆ ಕೊಡುತ್ತಿರುವ ಸಂಬಳವು ಎಷ್ಟಿದೆಯೆಂದರೆ ಮಾಹೇಯಾನ 30 ರೂಪಾಯಿಗಳು. ಆದರೆ ಈಗ ಅವರು ಸರ್ಕಾರದವರು ಈ IIನೆಯ ದರ್ಜೆ ಗುಮಾಸ್ತರುಗಳಿಗೆ ಏನೊಂದು ಸಂಬಳದ ಸ್ಕೇಲನ್ನು ಗೊತ್ತುಮಾಡಿದ್ದಾರೋ ಅಷ್ಟು ಸಂಬಳದ ಒಂದು ಸ್ಕೇಲನ್ನು ಅವರಿಗೂ ಗೊತ್ತುಮಾಡಿಕೊಡಬೇಕೆಂಬುದಾಗಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಈ ದಿವಸ ಈ IIನೆಯ ದರ್ಜೆ ಗುಮಾಸ್ತರಿಗೆ ಕೆಲಸಕ್ಕೆ ಸೇರಲು ಅವರು S.S.L.C. ಪರೀಕ್ಷೆಯನ್ನಾದರೂ ಪಾಸ್ ಮಾಡಿರಲೇಬೇಕೆಂಬ ನಿಯಮವನ್ನು ಅಂದರೆ ಒಂದು ಕ್ವಾಲಿಫಿಕೇಷನ್‌ನನ್ನು ನಿಗದಿಮಾಡಿದ್ದಾರೆ. ಆದರೆ ಈಗ ಸರ್ಕಾರದವರೂ ಕೂಡ ಈ ಕಾಪಿಯಿಸ್ಟರುಗಳಿಗೆ ಅದೇ ಕ್ವಾಲಿಫೀಕೇಷನ್ನನ್ನು ನಿಗದಿ ಮಾಡಿದ್ದಾರೆ ಎಂದು ಕೇಳುತ್ತೇನೆ. ಆದರೆ ಅವರಿಗೆ S.S.L.C. ಕ್ವಾಲಿಫಿಕೇಷ್ ಮಾತ್ರ ಇರಬೇಕು, ಅದಕ್ಕೆ ತಕ್ಕ ಹಾಗೆ ಸಂಬಳಮಾತ್ರ ಇರಬೇಕಾಗಿಲ್ಲವೆಂದು ಅವರಿಗೆ ಕೇವಲ ತಿಂಗಳಿಗೆ 30 ರೂಪಾಯಿಗಳನ್ನು ಕೊಡುವುದು ಸರಿಯಾದದ್ದಲ್ಲ. ಅವರಿಗೆ ಒಂದು ಗ್ರೇಡ್ ಸಹಿತ ಇಲ್ಲ. ಮೊದಲಿಂದ ಕೊನೆಯವರೆಗೂ ಒಂದೇ ಸಂಬಳ. ಹೀಗೆ ಮಾಡಿರತಕ್ಕದ್ದು ಸರಿಯಲ್ಲ. ಇವರಿಗೂ ಸಹ ಆ IIನೆಯ ದರ್ಜೆ ಗುಮಾಸ್ತರಿಗೆ ಕೊಟ್ಟಹಾಗೆ ತಿಂಗಳಿಗೆ 40 ರೂಪಾಯಿಗಳ ಸಂಬಳ ಮತ್ತು ಅವರ ಸ್ಕೇಲುಗಳನ್ನು ಕೊಡುವುದು ಉಚಿತವಾಗಿದೆ. ಅವರು ತಮ್ಮ ಮನವಿಯಲ್ಲಿ ಕೇಳಿರತಕ್ಕದ್ದು ಸಹ ಇದೇ ವಿಚಾರ. ಆದರೆ ಈಗ ಈ ಪ್ರೋತಾ ಸೂಚನೆಯನ್ನು ತಂದಿರತಕ್ಕಂಥ ಮಾನ್ಯ ಸದಸ್ಯರು ಈ ಕಾಪಿಯಿಂಗ್ ಕೆಲಸ ಬಹಳ ನಿಧಾನವಾಗುತ್ತಿದೆ, ಅದರ ಕೆಲಸ ಸಮರ್ಪಕವಾಗಿಲ್ಲ, ಕೆಲಸಕಾರ್ಯಗಳು ಜರೂರಾಗಿ ನಡೆಯುತ್ತಿಲ್ಲ, ಆದುದರಿಂದ ಅವರಿಗೆ ಕೊಡತಕ್ಕ ಸಂಬಳವನ್ನು ತಪ್ಪಿಸಿ ಹಿಂದೆ ಅವರಿಗೆ ಯಾವ ರೀತಿ ಒಂದು ಫೀಜನ್ನು ಕೊಡಲಾಗಿತ್ತೋ ಹಾಗೆ ಕೊಡತಕ್ಕಂಥ ವ್ಯವಸ್ಥೆಮಾಡಬೇಕೆಂದು ಹೇಳಿದ್ದಾರೆ. ಅವರು ಹೇಳಿರತಕ್ಕ ವಾದದಲ್ಲಿ ಕೂಡ ಕೆಲವು ವಾಸ್ತವಾಂಶಗಳಿರಬಹುದು, ಇಲ್ಲವೆಂದು ಹೇಳು

ವುದಿಲ್ಲ. ಆದರೆ ಹಾಗೆ ಆ ಕಾಪಿಯಿಸ್ಟುಗಳು ಈ ದಿವಸ ತಮಗೆ ಸಂಬಳ ಸಾರಿಗೆಗಳು ಸಾಲದೆಂಬ ನೆಪದಮೇಲೆ ಹೀಗೆ ಕೆಲಸಕಾರ್ಯಗಳು ನಿಧಾನವಾಗಿ ನಡೆಯುತ್ತಿವೆಯೇ ಅಥವಾ ಅವರು ತಮ್ಮ ಹಿಂದಿನ ಪದ್ಧತಿ ಪ್ರಕಾರ ಫೀಜನ್ನು ಪುನಃ ಹಾರಿಗೆ ತರ ಬೇಕೆಂದು ಮಾಡಲು ಹಾಗೆ ಮಾಡುತ್ತಿದ್ದಾರೆಯೇ, ಅಥವಾ ಮತ್ತೆ ಯಾವ ಕಾರಣದಮೇಲೆ ಹೀಗೆ ಆ ಕೆಲಸಕಾರ್ಯಗಳು ನಿಧಾನವಾಗುತ್ತಿರಬಹುದು ಎನ್ನುವುದನ್ನು ಆಲೋಚನೆ ಮಾಡತಕ್ಕದ್ದು ನೂಕ್ತ. ಆದರೆ ನನ್ನ ಅಭಿಪ್ರಾಯ ಈ ಸಂದರ್ಭದಲ್ಲಿ ಏನಿದೆಯೆಂದರೆ ಅವರಿಗೆ ಸರ್ಕಾರ ಈ ತಹಪರೆಗೂ ಆ IIನೆ ದರ್ಜೆಯ ಗುಮಾಸ್ತರ ಸಂಬಳ ಸಾರಿಗೆಗಳನ್ನು ಅವರಿಗೆ ಕೊಡದೆ ಇರುವುದರಿಂದಲೇ ಈ ಬಿಗುಪ್ಪೆ ಗಳೆಲ್ಲಾ ಉಂಟಾಗಿರುತ್ತವೆಂದೂ, ಅದರಿಂದಲೇ ಈಗ ಕೆಲಸಗಳೂ ಕೂಡ ನಿಧಾನವಾಗುತ್ತಿರಬಹುದೆಂದೂ ಕಂಡುಬರುವುದರಿಂದ, ಸರ್ಕಾರದವರು ಬೇಗ ಅವರ ಮನವಿಗೆ ಮನ್ನಣೆ ಕೊಡುವುದು ನೂಕ್ತವಾದುದೆಂದು ನಾನು ಸಲಹೆಮಾಡುತ್ತೇನೆ. ಈ ಕೇಳಿಕೆಗಳು ಬಹಳ ದಿನಗಳಿಂದಲೂ ಸರ್ಕಾರದವರ ಮುಂದೆ ಬರುತ್ತಿವೆ. ಅವರು ಈ ವಿಚಾರವಲ್ಲಿ ತೀವ್ರ ಗಮನ ಕೊಡತಕ್ಕದ್ದು ಒಳ್ಳೆಯದು.

ಇನ್ನು ಶ್ರೀ ಪಿ. ಆರ್. ರಾಮಯ್ಯನವರು ನ್ಯಾಯ ಅನ್ನುವುದು ಜನರಿಗೆ ಶೀಘ್ರವಾಗಿಯೂ ಮತ್ತು ಹೆಚ್ಚು ವೆಚ್ಚವಿಲ್ಲದಂತೆಯೂ ಜನರಿಗೆ ದೊರೆಯುವಂಥ ಒಂದು ಸೌಲಭ್ಯವನ್ನು ಜಾರಿಗೆ ತರಬೇಕೆಂಬ ವಿಚಾರದಲ್ಲಿ ಚರ್ಚೆ ನಡೆಸಬೇಕೆಂಬ ಅಭಿಪ್ರಾಯವನ್ನು ಅವರು ಖೋತಾ ಸೂಚನೆಯಲ್ಲಿ ತಿಳಿಸಿರುತ್ತಾರೆ. ಈ ವಿಚಾರದಲ್ಲಿ ಇತ್ತೀಚೆಗೆ ಏನೇನು ವ್ಯವಹಾರಗಳು ಎಲ್ಲೆಲ್ಲಿ ಹೀಗೆ ನಡೆಯುತ್ತಿವೆಯೆಂಬ ಅಂಶ ಈ ಮಾನ್ಯ ಸಭೆಯವರಿಗೂ ಗೊತ್ತಿರಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರ ಇಂಡಿಯಾ ಸರ್ಕಾರದವರ ಗಮನವನ್ನು ಕೂಡ ಸೆಳೆದಿದೆ. ಈ ಬಗ್ಗೆ ನಮ್ಮ ಭಾರತ ಸುಪ್ರೀಂ ಕೋರ್ಟಿನವರೂ ಕೂಡ ಕೆಲವು ಅಂಶಗಳನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ಏನೇನು ಮಾಡಬೇಕಾಗಿದೆ ಅನ್ನತಕ್ಕ ಬಗ್ಗೆ ಮಾನ್ಯ ಎಕ್ಸ್ ಹೋಂ ಮಿನಿಸ್ಟರಾಗಿದ್ದ ಖಟ್ಜುರವರೂ ಕೂಡ ಕೆಲವು ಸಲಹೆಗಳನ್ನಿತ್ತಿದ್ದಾರೆ. ಈಗ ಇರುವ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡ ಬೇಕಾಗಿರುತ್ತದೆಂದು ಅವರು ತಿಳಿಸಿದ್ದಾರೆ. ಆದರೂ ಸಹ ಜನರಿಗೆ ಈ ನ್ಯಾಯ ಬೇಗ ದೊರೆಯಬೇಕು, ಅದು ಅವರಿಗೆ ಸುಲಭವಾಗಿಯೂ ದೊರೆಯುವಹಾಗೆ ಅವಕಾಶವಿರಬೇಕು ಎಂದು ಸಲಹೆ ಮಾಡಿದ್ದಾರೆ. ಇದು ಬಹಳ ದೊಡ್ಡ ಸಮಸ್ಯೆ; ಇದನ್ನು ನಾವೆಲ್ಲರೂ ಬಹಳ ದೀರ್ಘವಾಗಿ ಪರಿಶೀಲನೆಮಾಡಿ ಇದನ್ನು ಬಗೆಹರಿಸ ಬೇಕಾಗಿದೆ ಅಂತಲೂ ಸಹ ಅವರು ತಿಳಿಸಿದ್ದಾರೆ. ಆದರೆ ಅವರು ತಿಳಿಸಿರುವ ಹಾಗೆ ಇದು ಬಹಳ ದೊಡ್ಡ ಕೆಲಸವೂ ಹೌದು ಮತ್ತು ಬಹಳ ಕಷ್ಟಕರವಾದ ಕೆಲಸವೂ ಹೌದು. ನಾವು ಈ ಶಾಸನಸಭೆಯಲ್ಲಿ ಕುಳಿತುಕೊಂಡು ನೂರಾರು ಕಾನೂನುಗಳನ್ನು ಮಾಡುತ್ತ ಹೋದರೆ ಸಮಾಜದಲ್ಲಿ ಇಲ್ಲದ ಕಾಂಪ್ಲಿಕೇಷನ್‌ಗಳು ಉಂಟಾಗಿ ಇದರಿಂದ ಜನರಿಗೆ ಇನ್ನೂ ಕಷ್ಟಗಳು ಜಾಸ್ತಿಯಾಗುತ್ತವೆಯೇ ಹೊರತು, ನಾವು ಅವರಿಗೆ ಅನುಕೂಲತೆಗಳನ್ನು ಹೆಚ್ಚಾಗಿ ಕಲ್ಪಿಸಿ ಕೊಟ್ಟಂತೆ ಆಗುವುದಿಲ್ಲ. ಈಗ ಹಾಲಿ ಇರತಕ್ಕ ಪದ್ಧತಿಯಲ್ಲಿ ಅನೇಕ ನ್ಯೂನತೆಗಳಿವೆ. ಜನರು ನ್ಯಾಯಕ್ಕಾಗಿ ಬಹಳ ಹಣವನ್ನು ಖರ್ಚುಮಾಡಬೇಕಾ ಗಿದೆ. ಇದನ್ನು ಹಾಗೆಯೇ ನೋಡಿದರೆ ಸರ್ಕಾರದವರು ಈ ಒಂದು ಭಾಗದಿಂದಲೂ ಅವರ ಬೊಕ್ಕಸಕ್ಕೆ ಹಣ ಬರುವಂತೆ ಮಾಡಿಕೊಂಡಿದ್ದಾರೇನೋ ಅನ್ನುವಂತೆ ಕಾಣುತ್ತಿದ್ದೆ. ಸರ್ಕಾರಕ್ಕೆ ಹೆಚ್ಚು ಹೆಚ್ಚು ಹಣ ಬೇಕಾದಂತೆಲ್ಲಾ ಜನರ ಮೇಲೆ ಖರ್ಚು ವೆಚ್ಚ ಗಳನ್ನು ಜಾಸ್ತಿಮಾಡುತ್ತಿದ್ದಾರೆಂದು ಜನರು ಅಡಿಕೊಳ್ಳುತ್ತಿದ್ದಾರೆ. ಈಗಾಗಲೇ ನಮ್ಮ ಮಾನ್ಯ ಸದಸ್ಯರು ಕೆಲವರು ತಿಳಿಸಿರುವ ಹಾಗೆ ಆ ಕೇಂದ್ರ ಸರ್ಕಾರದ ಟ್ಯಾಕ್ಸೇಷನ್ ನಮಿತಿಯವರು ಒಪ್ಪಿಸಿರ ತಕ್ಕ ವರದಿಯಲ್ಲಿ ಕೂಡ ಜನರಿಂದ ವಸೂಲ್ಮಾಡಿ ಕೊಳ್ಳುತ್ತಿರುವ ಸ್ಟಾಂಪ್ ಫೀ ಮತ್ತು ಕೋರ್ಟ್ ಫೀ ಬಹಳ ಜಾಸ್ತಿ ಆಯಿತು ಎಂದು ಹೇಳಲಾಗಿದೆ. ಜನರಿಗೆ ಸುಲಭವಾಗಿ ನ್ಯಾಯ ದೊರೆಯುವಂತೆ ಮಾಡಬೇಕಾ ಗಿದ್ದರೆ ಹೀಗೆ ದೊಡ್ಡ ದೊಡ್ಡ ಕೋರ್ಟುಗಳಿಗೇನೂ ಬರಬೇಕಾದ್ದಿಲ್ಲ, ಕೆಲವು ವಿಷಯಗಳಲ್ಲಾದರೂ, ಆ ತಕರಾರುಗಳನ್ನು ಆಯಾ ಊರಿನಲ್ಲೇ ಬಗೆ ಹರಿಸಿಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಮಾಡ ಬೇಕಾಗಿದೆ ಎಂಬುದಾಗಿ ಅವರು ತಮ್ಮ ವರದಿಯಲ್ಲಿ ಒಂದು ಸಲಹೆಯನ್ನು ಕೂಡ ಮಾಡಿದ್ದಾರೆಂದು ಕೇಳು ತ್ತೇನೆ. ಆದುದರಿಂದ ಈ ಒಂದು ಪ್ರಶ್ನೆಯನ್ನು ಅಂದರೆ ಸಾರ್ವಜನಿಕರಿಗೆ ಸುಲಭವಾಗಿ ನ್ಯಾಯ ದೊರೆಯುವಂತೆ ಮಾಡತಕ್ಕ ವಿಚಾರದಲ್ಲಿ ನಾವು ಏನು ಮಾಡಬೇಕಾಗಿದೆ ಎಂಬುದನ್ನು ಸರ್ಕಾರದವರು ಪರ್ಯಾಲೋಚನೆ ಮಾಡಬೇಕೆಂದು ಹೇಳುತ್ತೇನೆ. ಆಮೇಲೆ ಜನರು ಜನತಾಕೋರ್ಟುಗಳನ್ನು ಏರ್ಪಾಡು ಮಾಡಬೇಕೆಂದು ಆಗಿಂದಾಗ್ಗೆ ಅನೇಕರು ಸಲಹೆ ಗಳನ್ನು ಮಾಡುತ್ತಲೇ ಇದ್ದಾರೆ. ಹಾಗೆ ಅವುಗಳನ್ನು ಮಾಡುವುದಕ್ಕಾಗುವುದಿಲ್ಲ ಅನ್ನತಕ್ಕಂಥ ಒಂದು ವಾದ ಇದ್ದರೂ ಇರಬಹುದು. ಆದರೆ ಅದಕ್ಕೆ ಸಾಧ್ಯವಾಗುವ ರೀತಿ ಮಾಡಿದರೆ ಅದೇ ಆಗುತ್ತದೆ. ಜನರಿಗೆ ನ್ಯಾಯವು ಬೇಗ ದೊರೆಯು ವಂತೆ ಮಾಡಬೇಕಾಗಿದ್ದರೆ ಒಂದು ದರ್ಜೆಯ ಅಥವಾ ಒಂದು ಮಟ್ಟದ ಕೇಸುಗಳನ್ನೆಲ್ಲಾ ಆಯಾ ಹಳ್ಳಿ ಗಳಲ್ಲೇ ತೀರ್ಮಾನ ಮಾಡಿಕೊಳ್ಳುವಂಥ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ಮಾಡಿದ ಹೊರತು ನಮ್ಮ ಜನರಿಗೆ ಬೇಗ ನ್ಯಾಯ ದೊರೆಯಲಾರದು. ಆದ ಕಾರಣ ಇದಕ್ಕೆ ಒಂದು ಸುಲಭವಾದ ಮಾರ್ಗವನ್ನು ಕಂಡುಹಿಡಿಯಲು ಸರ್ಕಾರದವರು ಪ್ರಯತ್ನ ಮಾಡಲೇ ಬೇಕಾಗಿದೆ.

ಇನ್ನು ಈಗ ಜಾರಿಯಲ್ಲಿರತಕ್ಕಂಥ ಈ ರಾಯರ್ ಫೀಜು ಕೂಡ ಇತ್ತೀಚೆಗೆ ಜಾಸ್ತಿ ಆಗಿದೆ. ಸರ್ಕಾರ ದವರು ಸ್ಟಾಂಪ್ ಖರ್ಚುಗಳನ್ನು ಹೇಗೆ ಜಾಸ್ತಿ ಮಾಡಿದ್ದಾರೋ ಅದೇ ರೀತಿ ಈ ರಾಯರು ಗಳೂ ಕೂಡ ತಮ್ಮ fees ನ್ನು ಜಾಸ್ತಿ ಮಾಡಿದ್ದಾರೆ. ಕಾನೂನಿನಲ್ಲಿ 100 ರೂಪಾಯಿಗಳ ಹೆಡ್ಯೂಟಿ ಇರು ವಂಥ ಆಸ್ತಿಗೆ ಐದು ರೂಪಾಯಿ ಫೀಜನ್ನು ರಾಯರು ಗಳು ತೆಗೆದುಕೊಳ್ಳಬೇಕು ಎಂದು ಇದೆ. ಆದರೆ ನನಗಾದರೂ ಅನ್ನಿಸುತ್ತದೆ—ಈ ರಾಯರುಗಳನ್ನೂ ಕೂಡ ನ್ಯಾಷನಲೈಜ್ ಮಾಡಿಕೊಳ್ಳುವುದು ಒಳ್ಳೆಯದು ಎಂದು.

Mr. SPEAKER.—All the lawyer members agree.

ಶ್ರೀ ಡಿ. ದೇವರಾಜ ಅರಸ್.—ಇದು ಹೇಗೆ ಮಾಡುವುದು ಎಂದರೆ. . . .

Sri A. G. RAMACHANDRA RAO.—I believe the lawyers would welcome it most.

Sri D. DEVARAJ URS.—So if my suggestion is welcomed by the lawyers, it will be welcome by the public as well. ಇದನ್ನು ಹೇಗೆ ಮಾಡಬಹುದು ಎಂದರೆ—ವಕೀಲರುಗಳನ್ನೆಲ್ಲಾ ಸರ್ಕಾರದವರು ತಮ್ಮ ಹಿಡಿತಕ್ಕೆ ತೆಗೆದುಕೊಂಡು, ಅವರಿಗೆ ತಿಂಗಳಿಗಿಷ್ಟು ಎಂದು ಒಂದು ಸಂಬಳವನ್ನು ಗೊತ್ತು ಮಾಡಿ ಅವರನ್ನು ಈ ಕೆಲಸಕ್ಕೆ ನೇಮಿಸಿ, ಅವರು ದುಡಿಯುವ ಹಣವನ್ನೆಲ್ಲಾ ಸರ್ಕಾರಕ್ಕೆ ಬರುವ ಹಾಗೆ ಒಂದು ಏರ್ಪಾಡನ್ನು ಮಾಡಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗೆ ಮಾಡಿದರೆ ಈ ಸಭೆಗೆ ಬರತಕ್ಕವರು ಯಾರು ?

ಶ್ರೀ ಡಿ. ದೇವರಾಜ ಅರಸ್.—ಈ ವಕೀಲರನ್ನು ಪ್ರತಿನಿಧಿಸತಕ್ಕಂಥ ಜನಗಳೂ ಬೇರೆ ಇದ್ದಾರೆ. I am serious about it. I would go one step further. If my lawyer friend wants to be a member of the House, let him not be a lawyer at all. That solves the problem easily. ಆಮೇಲೆ ಹೀಗೆ ಇವರನ್ನು ಸಂಬಳದ ಮೇಲೆ ನೇಮಕ ಮಾಡಿಕೊಂಡ ಮೇಲೆ ಇವರಿಗೆ ಸಂಬಳ ಸಾರಿಗೆ ಹೇಗೆ ಕೊಡುವುದು ಎಲ್ಲಿಂದ ತರುವುದು ಎಂದು ಕೇಳಬಹುದು. ಅದಕ್ಕೆ ನಾನಾಗಲೇ ಹೇಳಿದಂತೆ, ಇವರು ಜನಗಳಿಂದ ವಸೂಲ್ಮಾಡುತ್ತಿರುವಂಥ ಫೀಜನ್ನು ಸರ್ಕಾರದವರೇ ತೆಗೆದುಕೊಂಡು ಅದರಲ್ಲಿ ಒಂದು ಭಾಗವನ್ನು ಇವರಿಗೆ ಹಂಚಿ ಇವರಿಂದ ಅದೇ ಲಾಯರ್ ವೃತ್ತಿಯ ಕೆಲಸವನ್ನು ಮಾಡಿಸಬಹುದು. ನಾನೀಗ ಅನೇಕ ವಿಚಾರಗಳನ್ನು ಸರ್ಕಾರದವರ ಮುಂದೆ ಇಟ್ಟಿದ್ದೇನೆ. ಅವರು ಎಲ್ಲಾ ಅಂಶಗಳನ್ನೂ ಕೂಲಂಕಷವಾಗಿ ಪರಿಶೀಲನೆಮಾಡಿ ಇದನ್ನು ಸಾಧ್ಯವಾದಮಟ್ಟಿಗೂ ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಮಾರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಕೆ. ಪಾಚಾಕ್ಷಯ್ಯ (ಅರಸೀಕೆರೆ).—ಸ್ವಾಮಿ ಈಗಾಗಲೇ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀ ಪಾರ್ಕಾಪಿ. ರಾಮಯ್ಯನವರು ತಮ್ಮ ಕತ್ತರಿ ನಿರ್ಣಯವನ್ನು ಸಭೆಯಮುಂದೆ ಮಂಡಿಸುತ್ತ ಇತ್ತೀಚೆಗೆ ದೇಶದಲ್ಲಿ ಮುಕ್ತಾ ಜನತೆಗೆ ನ್ಯಾಯ ತೀರ್ಪು ದೊರಕಿಸಿಕೊಳ್ಳುವ ಸಂದರ್ಭದಲ್ಲಿ ಹೆಚ್ಚು ಖರ್ಚು ಪೆಚ್ಚಗಳು ಬರುತ್ತಿವೆ. ಅಲ್ಲದೆ ಹೆಚ್ಚು ಕಾಲಹರಣ ಬೇರೆ ಆಗುತ್ತಿದೆ ಎಂದು ಹೇಳಿದರು. ಜನಸಾಮಾನ್ಯರಿಗೆಲ್ಲಾ ನ್ಯಾಯವು ಸುಲಭವಾಗಿ ದೊರೆಯಬೇಕಾದ ಅಗತ್ಯವನ್ನು ಬಹಳ ಹಿಂದಿನ ಕಾಲದಿಂದಲೂ ಒತ್ತಾಯಪಡಿಸುತ್ತಲೇ ಬಂದಿದ್ದೇವೆ. ಸುಮಾರು ಇಲ್ಲಿಗೆ 50 ವರ್ಷಗಳ ಹಿಂದಿನಿಂದಲೂ ನ್ಯಾಯದ ಬಗ್ಗೆ ಜನರಿಗೆ ಆಗುತ್ತಿರುವ ಖರ್ಚನ್ನು ಕಡಮೆ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಕಂಡುಹಿಡಿಯಬೇಕೆಂಬ ಒತ್ತಾಯಗಳು ಸರ್ಕಾರದ ಮುಂದೆ ಬರುತ್ತಲೇ ಇವೆ. ಆದರೆ ಇತ್ತೀಚೆಗೆ ಮೊನ್ನೆತಾನೆ ಸರ್ಕಾರದವರು ಈ ವಿಷಯಗಳನ್ನೆಲ್ಲಾ ಪುನಃ ಪರಿಶೀಲನೆ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸತಕ್ಕ ಬಗ್ಗೆ ಶ್ರೀಯುತ ಜಸ್ಟಿಸ್ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. ಇದು ಬಹಳ ಶ್ಲಾಘನೀಯವಾದಂಥ ಕೆಲಸ. ಸರ್ಕಾರದವರಿಗೆ ಈಗಾಗಲೇ ಶ್ರೀ ಮಲ್ಲಪ್ಪನವರ ಸಮಿತಿಯವರು ಒಪ್ಪಿಸಿರತಕ್ಕಂಥ ವರದಿಯನ್ನು ಈ ಸಭೆಯ ಮುಂದೆ ತಂದಿದ್ದರೆ ಚೆನ್ನಾಗಿತ್ತು, ಆ ವರದಿ ಸರ್ಕಾರದವರ ಕೈ ಸೇರಿರುವುದರಿಂದ ಇನ್ನಾದರೂ ಸರ್ಕಾರ ಕೂಡಲೇ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ಈ ರೀತಿ ನ್ಯಾಯವು ಸುಲಭವಾಗಿ ದೇಶಕ್ಕೆಲ್ಲಾ ದೊರೆಯುವಂತೆ ಮಾಡಬೇಕೆಂದೂ, ಹಾಗೆ ಮಾಡದಿದ್ದರೆ ಜನಸಾಮಾನ್ಯರ ಜನರಿಗೆ ಬಹಳ ತೊಂದರೆಯಾಗುತ್ತದೆಂದೂ ಹೇಳುತ್ತೇನೆ.

ಇನ್ನು ನಮ್ಮ ಅರಸೀಕೆರೆಯ ವಿಚಾರ ಸ್ವಲ್ಪ ಹೇಳಬೇಕಾಗಿದೆ. ಈ ಹಿಂದೆ ಅಲ್ಲಿ ಒಂದು ಬೆಂಚ್ ಕೋರ್ಟಿತ್ತು, ಆ ಕೋರ್ಟನ್ನು ಇಲ್ಲಿಗೆ ಎರಡು ವರ್ಷಗಳ ಹಿಂದೆ ತೆಗೆದು ಹಾಕಿದರು. ಈಗ ಆ ಅರಸೀಕೆರೆಗೆ ಒಂದು ಕೋರ್ಟನ್ನು ಕೊಡಬೇಕೆಂದು ಬಹಳ ದಿವಸಗಳಿಂದಲೂ ಒತ್ತಾಯಮಾಡುತ್ತಿದ್ದೇವೆ. ಈ ಹಿಂದೆ ಮಾನ್ಯ ನ್ಯಾಯಾಂಗ ಸಚಿವರು ಅರಸೀಕೆರೆಗೆ ಬಂದಿದ್ದಾಗ ಈ ವಿಚಾರವನ್ನು ಅಲ್ಲಿಯ ಜನರು ತಿಳಿಸಿದ್ದಕ್ಕೆ ಅರಸೀಕೆರೆಗೆ ಒಂದು ಕೋರ್ಟನ್ನು ಕೊಡಿಸತಕ್ಕ ವಿಚಾರದಲ್ಲಿ ಸರ್ಕಾರದವರು ಹೈಕೋರ್ಟಿಗೆ ಒತ್ತಾಯ ಮಾಡುತ್ತೇವೆಂದು ಹೇಳಿದ್ದರು. ಈಗ ಅರಸೀಕೆರೆಯಲ್ಲಿ ಒಂದು ಕೋರ್ಟು ಇಲ್ಲದೆ ಇರುವುದರಿಂದ ಯಾವ ಒಂದು ಚಿಕ್ಕ ಪುಟ್ಟ ಕೇಸಿಗೂ ಹಾಸನಕ್ಕೇ ಹೋಗಬೇಕಾಗಿದೆ. ಹಾಸನ ಅರಸೀಕೆರೆಗೆ 55 ಮೈಲಿಗಳಾಗುತ್ತದೆ. ಇಷ್ಟು ಫಾಸಲೆ ಹೋಗಿ ನ್ಯಾಯ ಪಡೆಯುವುದಕ್ಕೆ ಬಡ ಜನರಿಗೆ ಬಹಳ ತೊಂದರೆಯುಂಟಾಗಿದೆ. ಈ ಅಂಶವನ್ನು ಸರ್ಕಾರದವರು ಮನಗಾಣಬೇಕೆಂದು ಹೇಳುತ್ತೇನೆ. ಆದರೆ ಈಗ ನಾನು ಈ ಖೋತಾ ಸೂಚನೆಯನ್ನು ತಂದಿರತಕ್ಕದ್ದರ ಉದ್ದೇಶವೇನೆಂದರೆ ನಮ್ಮ ಅರಸೀಕೆರೆ ತಾಲ್ಲೂಕಿಗೆ ಅರಸೀಕೆರೆ ಕಸಬಾದಲ್ಲಿ ಒಂದು ಮುನಿಸಿಫ್ ಮ್ಯಾಜಿಸ್ಟ್ರೇಟರ ಕೋರ್ಟನ್ನು ತೆರೆಯಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸತಕ್ಕದೇ ಆಗಿದೆ. ಇದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನಾನು ಈ ಕೋರ್ಟುಗಳ ಪುನರ್ವಚನೆಯಬಗ್ಗೆ ಒಂದೆರಡು ಮಾತುಗಳನ್ನಾಡಬೇಕೆಂದು ಇಷ್ಟಪಟ್ಟಿದ್ದೇನೆ. ಈಗಾಗಲೇ ಮಾತನಾಡಿದ ನನ್ನ ಮಾನ್ಯ ಸ್ನೇಹಿತರು ಅರಸೀಕೆರೆಗೊಂದು ಮುನಿಸಿಫ್-ಮ್ಯಾಜಿಸ್ಟ್ರೇಟರ ಕೋರ್ಟುಬೇಕೆಂದು ಕೇಳಿದ್ದಾರೆ. ಹೀಗೆಯೇ ಪ್ರತಿಯೊಬ್ಬ ಸದಸ್ಯರೂ—ಚನ್ನರಾಯಪಟ್ಟಣಕ್ಕೊಂದು ಕೋರ್ಟುಕೊಡಿ, ತಿರುಮಕೂಡಲು ನರಸೀಪುರಕ್ಕೊಂದು ಕೋರ್ಟು ಕೊಡಿ ಎಂಬುದಾಗಿ ಕೇಳುತ್ತಾ ಹೋದರೆ ಇನ್ನು ಸರ್ಕಾರದವರು 50 ಹೊಸ ಕೋರ್ಟುಗಳನ್ನಾದರೂ ಸ್ಥಾಪನೆ ಮಾಡಬೇಕಾಗಿ ಬರುತ್ತದೆ. ಆದರೆ ಈಗ ಸರ್ಕಾರಕ್ಕೆ ಬಂದಿರುವ ಆ ಸಮಿತಿಯವರ ವರದಿಯಲ್ಲಿ ಏನು ಅಡಕವಾಗಿದೆ ಎನ್ನುವುದು ನಮಗೆ ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ಲಾಯರುಗಳ ಸಮೂಹ, ಕೋರ್ಟುಗಳ ಸನ್ನಿವೇಶ, ಪೋಲೀಸ್ ಸ್ಟೇಷನ್‌ಗಳು ಇರತಕ್ಕಕಡೆ ಜನರಿಗೆ ಅಷ್ಟೇನೂ ನೆಮ್ಮದಿಯಿರುವುದಿಲ್ಲ, ಅವರಿಗೆ ಇವುಗಳಿಂದ ಯಾವ ಹಿತವೂ ದೊರೆಯಲಾರದೆಂದು ಹೇಳುತ್ತೇನೆ. ಇದರ ಬಗ್ಗೆ ನಾನು ಅಂಕಿ ಅಂಶಗಳೊಂದಿಗೆ ಎಲ್ಲವನ್ನೂ ಸಮೂಲಾಗ್ರವಾಗಿ ಪರಿಶೋಧನೆಮಾಡಿ ಇದನ್ನು ಹೇಳುತ್ತಿದ್ದೇನೆ. ಈ ದಿವಸ ತಾವು ಯಾವ ಯಾವ ಪ್ರದೇಶಗಳು ಈ ಪೋಲೀಸ್ ಸ್ಟೇಷನ್‌ಗಳ ಸುತ್ತಮುತ್ತ ಮತ್ತು ಕೋರ್ಟು ಇರುವ ಸ್ಥಳದ ಸುತ್ತ ಮುತ್ತ ಇವೆಯೋ ಅಂಥ ಸ್ಥಳಗಳಿಂದಲೇ ಹೆಚ್ಚು ಕೇಸುಗಳು ಬರುತ್ತಿವೆಯೆಂಬುದು ಗೊತ್ತಾಗುತ್ತದೆ. ಈ ವಿಚಾರದಲ್ಲಿ ನಾನು ಅನೇಕರನ್ನು ವಿಚಾರಕೂಡ ಮಾಡಿದ್ದೇನೆ. ಯಾರು ಜನಾನುರಾಗಿಗಳಾಗಿದ್ದಾರೋ ಅಂಥವರೂ, ಮತ್ತು ಈ ಲಿಟಿಗೇಷನ್ ಬಗ್ಗೆ ಅಷ್ಟಾಗಿ ಮನಸ್ಸಿಲ್ಲದವರೂ ಈ ವಿಷಯಗಳಿಗೆ

ಅಷ್ಟಾಗಿ ಮನಸ್ಸು ಕೊಡುವುದಿಲ್ಲ. ಈ ಕೋರ್ಟುಗಳನ್ನು ಅವರು ಅಪೇಕ್ಷಿಸಿದುವುದಿಲ್ಲ. ಆದರೆ ಇನ್ನೂ ಕೆಲವು ವರ್ತಕರು ಮತ್ತು ಟಾಟ್ಸ್‌ಗಳಿಗೆ ಇದು ಬೇಕಾಗಿರುತ್ತೆಂದು ಹೇಳಬಹುದು. ಆದರೆ ಈ ದಿವಸ ಸರ್ಕಾರ ತನ್ನ ಖರ್ಚನ್ನು ಯಾವ ಯಾವ ಬಾಬಿನಲ್ಲಿ ಕಡಮೆ ಮಾಡಬಹುದು ಎನ್ನುವುದನ್ನು ಆಲೋಚನೆ ಮಾಡಬೇಕಾದಂಥ ಕಾಲ ಈಗ ಬಂದಿದೆ. ಆದರೆ ಈಗ ಇರತಕ್ಕ ಕೋರ್ಟುಗಳ ಜೂರಿಸ್ ಡಿಕ್ಷನ್‌ನಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಇರಬಹುದು. ಆದರೆ ಇಂಥ ಹೊಸ ಕೋರ್ಟನ್ನು ಏರ್ಪಡಿಸುವುದಕ್ಕಿಂತ ಹಳ್ಳಿಗಳಲ್ಲಿ ದಕ್ಷರಾದಂಥ ಜನಗಳ ನೇತೃತ್ವದಲ್ಲಿ ಒಂದು ಕೋರ್ಟನ್ನು ಬೇಕಾದರೆ ಮಾಡಬಹುದು. ಹಾಗೆ ಹೇಳಿದರೆ ನಾನು ಅದಕ್ಕೆ ತುಂಬ ಬೆಂಬಲಿಸುತ್ತೇನೆ. ಆದರೆ ನಾವೀಗ ಇರತಕ್ಕಂಥ ಕೋರ್ಟುಗಳ ವ್ಯವಸ್ಥೆಯನ್ನು ಮಾತ್ರ ಖಂಡಿತ ಬದಲಾಯಿಸಬಾರದು. ಅವುಗಳು ಈಗ ಇದ್ದಹಾಗೆಯೇ ಇರಬೇಕು. ಆ ಮಲ್ಲಪ್ಪನವರ ಸಮಿತಿಯ ವರದಿ ಯಾವ ರೀತಿಯಿದ್ದರೂ ಇರಲಿ. ಈ ಕೋರ್ಟುಗಳ ಸಂಖ್ಯೆಯನ್ನು ಹೆಚ್ಚಿಸಬಾರದು ಎಂದು ಹೇಳುತ್ತೇನೆ. ಆದರೆ ಶ್ರೀ ಕೆ. ಪಂಚಾಕ್ಷರಯ್ಯನವರು ಅರಸೀಕೆರೆಗೆ ಕೋರ್ಟು ಬೇಕೆಂದು ಕೇಳಿರುವುದರ ಬಗ್ಗೆ ನನಗೇನೂ ಅಂಥ ವಿರೋಧವಿಲ್ಲ. ಅಲ್ಲಿಗೆ ಕೊಡಬಾರದು ಅನ್ನುವ ಉದ್ದೇಶದಿಂದ ನಾನು ಇದನ್ನು ಹೇಳುತ್ತಿಲ್ಲ. ಹೀಗೆ ಪ್ರತಿಯೊಬ್ಬರೂ ಕೇಳುತ್ತಾ ಹೋದರೆ ಆಗ ನಾವು ಚಿತ್ರದುರ್ಗಕ್ಕೂ ಕೂಡ ಕೊಡಬೇಕಾಗುತ್ತದೆ; ಬೇಲೂರಿಗೂ ಒಂದು ಕೊಡಬೇಕಾಗುತ್ತದೆ. ನಾನು ತಿಳಿದುಕೊಂಡಿರುವ ಹಾಗೆ, ಹಾಸನಜಿಲ್ಲಾ ಹೆಡ್‌ಕ್ವಾರ್ಟರಿನಲ್ಲಿದ್ದು ಪ್ರತಿ ತಾಲ್ಲೂಕಿಗೂ ಇಪ್ಪತ್ತು ಇಪ್ಪತ್ತನಾಲ್ಕು ಮೈಲಿ ಒಳಗಿದೆ. ಚನ್ನರಾಯಪಟ್ಟಣದಿಂದ ಹಾಸನಕ್ಕೆ ಬರುವುದಕ್ಕೆ ಇಷ್ಟಪಡುತ್ತಾರೆ, ಆದರೆ ಅರಸೀಕೆರೆಗೆ ಹೋಗುವುದಕ್ಕಿಷ್ಟಪಡುವುದಿಲ್ಲ. ಅರಸೀಕೆರೆಯವರು ಚನ್ನರಾಯಪಟ್ಟಣಕ್ಕೆ ಹೋಗುವುದಕ್ಕೊಪ್ಪುವುದಿಲ್ಲ. ಆದುದರಿಂದ ಜನರ ಅಭಿಪ್ರಾಯ ಹೇಗೆ ಒಂದಾಗುತ್ತದೆ? ಆದಕಾರಣ ಇದು ಯುಕ್ತವಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಬಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ನಾನು ಹೆಚ್ಚು ಹೇಳುವುದಿಲ್ಲ. ಚಿತ್ರದುರ್ಗಕ್ಕೆ ಒಂದು ಡಿಸ್ಟ್ರಿಕ್ಟ್ ಕೋರ್ಟು ಕೊಡಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದೇವೆ. ಹೋದ ಸಾರಿ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಈ ಸಂಬಂಧದಲ್ಲಿ ಒಂದು ಪ್ರಶ್ನೆ ಕೇಳಿದ್ದರು. ಅದಕ್ಕೆ ಕೊಟ್ಟಿದ್ದ ಉತ್ತರದ ಪ್ರಕಾರ, ಶಿವಮೊಗ್ಗ, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಅಂಕಿ ಅಂಶಗಳನ್ನು ತೆಗೆದು ಕೊಂಡರೆ, ಚಿತ್ರದುರ್ಗ ಜಿಲ್ಲೆಯಿಂದಲೇ ಹೆಚ್ಚು ಕೇಸುಗಳು ಬರುತ್ತವೆ. ಆದಕಾರಣ ಈಗ ಆ ಜನರೆಲ್ಲರೂ ಚಿತ್ರದುರ್ಗದಿಂದ ಶಿವಮೊಗ್ಗಕ್ಕೆ ನೂರು-ನೂರೈವತ್ತು ಮೈಲಿ ಹೋಗಬೇಕಾಗಿದೆ. ಇದು ತಮಗೂ ಗೊತ್ತಿದೆ, ತಮ್ಮ ಅನುಭವಕ್ಕೂ ಬಂದಿದೆ. ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಹೋಗುವ ಮೊಕದ್ದಮೆಗಳು ಹೆಚ್ಚಿನ ಬೆಲೆಯ ಆಸ್ತಿಗಳಿಗೆ ಸಂಬಂಧಪಟ್ಟವು. ಕಷ್ಟಕಾರರಿಗೆ ಬಹಳ ತೊಂದರೆಯಾಗುತ್ತಿದೆ.

ನಮ್ಮ ಮಂತ್ರಿಗಳು ಅಲ್ಲಿ ಬಾರ್ ಅಸೋಸಿಯೇಷನ್‌ಗೆ ಬಂದಿದ್ದಾಗ ಅಲ್ಲಿನ ಕಷ್ಟ ನಷ್ಟುಗಳನ್ನು ನಿವೇದನೆ ಮಾಡಿಕೊಂಡಿದ್ದೇವೆ. ಅವರು ಸಹಾನುಭೂತಿಯಿಂದ ಚಿತ್ರದುರ್ಗಕ್ಕೆ ಖಂಡಿತ ಕೊಡಬೇಕೆಂದು ಭರವಸೆ ಕೊಟ್ಟಿದ್ದರು, ಮುಂದೆ ಬರತಕ್ಕ Reorganisation ಕಮಿಟಿಯ ವರದಿಯನ್ನು ಪರಿಶೀಲನೆ ಮಾಡುವಾಗ ಇದನ್ನು ನೋಡಬೇಕು. ಶ್ರೀಮಾನ್ ಮುಲ್ಕ ಗೋವಿಂದರೆಡ್ಡಿಯವರೂ ನಾನೂ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಪಟ್ಟರೂ ಕೂಡ, ಈ ವಿಷಯದಲ್ಲಿ ನಾವಿಬ್ಬರೂ ಒಂದೇ ಅಭಿಪ್ರಾಯ ಕೊಡಬೇಕಾದರೆ, ಇದೆಂಥ ಮುಖ್ಯ ವಿಷಯ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಸ್ವಾಮಿ, ನ್ಯಾಯಾಂಗ ಸ್ವತಂತ್ರವಾಗಿರಬೇಕೆಂದು ಅನೇಕ ಮಹನೀಯರು ಹೇಳುತ್ತಾರೆ. ನಾನು ಅಧ್ಯಕ್ಷರ ವಿಶೇಷ ಅನುಮತಿ ಪಡೆದು ಎರಡು ಮಾತು ಹೇಳಬೇಕಾಗಿದೆ. ಈ ಹೊತ್ತಿನ ದಿವಸ, ನಮಗೆ ನ್ಯಾಯಾಂಗವನ್ನು ಬೇರೆ ಮಾಡುವುದು ನ್ಯಾಯವೆ, ತಪ್ಪೆ ಅಥವಾ ಸರಿಯೆ ಎನ್ನುವುದನ್ನು ಪರಿಶೀಲನೆ ಮಾಡಿ ಅಭಿಪ್ರಾಯಕೊಡಲು ಅವಕಾಶವಿದೆಯೇ ಅಥವಾ ಇಲ್ಲವೆ ಎಂಬ ಅನುಮಾನವನ್ನು ಕೆಲವರು ವ್ಯಕ್ತಪಡಿಸುತ್ತಾರೆ. ನಾನಾದರೋ ಇದಕ್ಕೆ ನಮಗೆ ಅವಕಾಶವುಂಟು, ಟೀಕೆ ಮಾಡುವ ಅಧಿಕಾರವಿದೆ ಎಂದು ತಿಳಿದುಕೊಂಡಿದ್ದೇನೆ. Whether Legislature is sovereign or Judiciary is sovereign ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿದೆ. ಕಾನೂನಿನ ಚೌಕಟ್ಟು ಅಥವಾ ಅಳತೆಯಲ್ಲಿ ನ್ಯಾಯಾಂಗ ಸ್ವತಂತ್ರವಾಗಿರಬೇಕೇ ಏನಾ ಸಂಪೂರ್ಣವಾಗಿ ಸ್ವತಂತ್ರವಾಗಿರಬಾರದು. ಶಾಸನಕಾಂಗ ಸ್ವತಂತ್ರವಾಗಿರಬೇಕು. "ಸಂಪೂರ್ಣ ಸ್ವಾತಂತ್ರ್ಯ ಎನ್ನುವುದು ಶುಷ್ಕವಾದ. ನ್ಯಾಯಾಂಗದಲ್ಲಿರುವ ಕುಂದುಕೊರತೆಗಳನ್ನು ಯಾರು ನೋಡಿಲ್ಲ? ಅನೇಕ ಇವೆ. ಈ ಹೊತ್ತಿನ ದಿವಸ ಕಕ್ಷಿಗಾರರಿಗೆ ಭಯವುಂಟಾಗಿದೆ. ಅನೇಕ ನ್ಯಾಯಾಧೀಶರು ಪ್ರಾಮಾಣಿಕತೆಯನ್ನು ಸಹ ಉಳಿಸಿಕೊಂಡಿಲ್ಲವೆಂಬ ಅಭಿಪ್ರಾಯವಿದೆ. ಇದನ್ನು ಟೀಕೆ ಮಾಡುವ ಹಕ್ಕು ನಮ್ಮಲ್ಲಿದೆ, ಈ ಅಧಿಕಾರವಿದೆಯೆಂದು ತಿಳಿದುಕೊಂಡಿದ್ದೇನೆ. ಇದನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ನಾನು ಹೇಳುವುದು ತಪ್ಪಿಲ್ಲ, contempt ಎಂದು ಹೆದರುವುದಕ್ಕವಕಾಶವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ನ್ಯಾಯಾಂಗವನ್ನು ಪುನರ್ವ್ಯವಸ್ಥೆ ಮಾಡುವ ವಿಷಯದಲ್ಲಿ ಜಸ್ಟಿಸ್ ಮಲ್ಲಪ್ಪನವರ ನಾಯಕತ್ವದಲ್ಲಿ ನೇಮಕವಾದ ಸಮಿತಿಯ ವರದಿ ಬಹಳ ಪರಿಪೂರ್ಣವಾಗಿದೆ ಎಂದು ನನ್ನ ಅಭಿಪ್ರಾಯ. ಅವರು ಈ ವಿಷಯದಲ್ಲಿ ತಜ್ಞರು. ಸರ್ಕಾರದ ಹೊರೆ ಎಷ್ಟಿದೆ, ಸರ್ಕಾರದ ವೆಚ್ಚ ಅಧಿಕವಾಗುವ ಸಂಭವವಿದೆಯೆ ಎಂಬ ವಿಷಯವನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡದೆ ನಲಹೆ ಮಾಡಿಲ್ಲವೆಂದು ಭಾವಿಸುತ್ತೇನೆ. ಅವರು ಈಗ ಸಾಮಾನ್ಯವಾಗಿ ಇರುವ ಲೋಪದೋಷಗಳೇನು ಎಂಬುದನ್ನೆಲ್ಲಾ ವಿಮರ್ಶಿಸಿ, ಗ್ರಾಮಾಂತರ ಗಳಿಂದ ಬರುವ ವಾದಿ ಪ್ರತಿವಾದಿಗಳಿಗೆ ಕೋರ್ಟಿನಲ್ಲಿ ಸುಲಭವಾಗಿ ನ್ಯಾಯ ದೊರಕುವಂತೆ ಯಾವ ಏರ್ಪಾಡು ಮಾಡಬೇಕೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ವರದಿಯನ್ನು ಸರ್ಕಾರಕ್ಕೆ ತಲಪಿಸಿರಬಹುದೆಂದು ನನ್ನ ಭಾವನೆ. ಮೈಸೂರು ಸಂಸ್ಥಾನದಲ್ಲಿ ಒಂದೇ ಸ್ಥಳದಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್ ಮತ್ತು ಮುನ್ಸೀಫ್ ಕೋರ್ಟ್ ಎರಡೂ ಇರುವುದು ಅನಾವಶ್ಯಕವೆಂದು ನನ್ನ ಭಾವನೆ. ಅಂಥ ಸ್ಥಳಗಳಲ್ಲಿ ಮುನ್ಸೀಫ್ ಕೋರ್ಟ್‌ಗಳನ್ನು ರದ್ದುಮಾಡಿ ಆ ಕೆಲಸವನ್ನು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ವಹಿಸಿ, ಉಳಿಯುವ ಹೆಣದಲ್ಲಿ ಹತ್ತು ಹನ್ನೆರಡು ಮೈಲಿ ದೂರದಲ್ಲಿ ಅನೇಕರಿಗೆ ಸುಲಭ ಖರ್ಚಿನಲ್ಲಿ ನ್ಯಾಯ ದೊರೆಯುವಂತೆ

(ಶ್ರೀ ಯು. ಎಂ. ಮಾದಪ್ಪ.)

ಮತ್ತೊಂದು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸ್ಥಾಪನೆಮಾಡುವುದಕ್ಕವಕಾಶವಿದೆ. ಉದಾಹರಣೆಗೆ ನಂಜನಗೂಡಿನಲ್ಲಿ ಮುನ್ಸೀಫ್ ಕೋರ್ಟ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟ್ ಎರಡೂ ಇವೆ. ಅಲ್ಲಿ ಒಂದೇ ಮಾಡಿದರೆ, ಚಾಮರಾಜನಗರದಲ್ಲಿ ಮುನ್ಸೀಫ್ ಕೋರ್ಟನ್ನು ಮಾಡುವುದಾದರೆ, ಅದೇ ಬಜೆಟ್‌ನಲ್ಲಿ ಮಾಡಬಹುದು. ಅಲ್ಲಿ ಕೊಡುತ್ತಿರುವ ಬಾಡಿಗೆಗೆ ಇಲ್ಲಿ ಕಟ್ಟಡ ತೆಗೆದುಕೊಳ್ಳಬಹುದು. ಹೆಚ್ಚು ಖರ್ಚಾಗುವುದಿಲ್ಲ. ಕೋರ್ಟುಗಳು ಹತ್ತಿರವಾದಷ್ಟು ಲಿಟಿಗೇಷ್ಟಗಳು ಹೆಚ್ಚುತ್ತವೆಂದು ಒಬ್ಬ ಮಿತ್ರರು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ದೂರವಾದಷ್ಟೂ ನ್ಯಾಯವಿಮರ್ಶೆಯಾಗಲು ಅವಕಾಶವಾಗದೆ ಅನೇಕರಿಗೆ ನ್ಯಾಯ ದೊರೆಯದೇ ಹೋಗಬಹುದೆಂದು ನನ್ನ ವಾದ. ಆದಷ್ಟು ಹತ್ತಿರದಲ್ಲಿ ನ್ಯಾಯಾಸ್ಥಾನವಿರುವುದು ಅವಶ್ಯಕ. ಈ ವಿಷಯದಲ್ಲಿ ರಾಯರುಗಳ ಅಭಿಪ್ರಾಯವನ್ನು ತೆಗೆದುಕೊಳ್ಳುವುದರಲ್ಲಿ ಸ್ವಲ್ಪ ಆಲೋಚನೆ ಮಾಡಿ ತೆಗೆದುಕೊಳ್ಳಬೇಕಾಗಿದೆ. ಮೊದಲನಿಂದ ಒಂದೇ ಸ್ಥಳದಲ್ಲಿ ಮನೆಮಠಗಳನ್ನು ಮಾಡಿಕೊಂಡಿರುವ ರಾಯರುಗಳಿಗೆ ಅವರ ಕಕ್ಷಿಗಾರರು ತಮ್ಮಲ್ಲಿಗೆ ಬರುತ್ತಾರೋ ಇಲ್ಲವೋ ಎಂಬ ಮನೋಭಾವದಿಂದ ಈ ರೀತಿ ಮಾಡುವುದು ಬೇಡವೆಂದು ಹೇಳುವವರೂ ಇದ್ದಾರೆ. ಆದುದರಿಂದ ಈ ವಿಷಯದಲ್ಲಿ ಹೊಸ ರಾಯರುಗಳ ಅಭಿಪ್ರಾಯವನ್ನು ತೆಗೆದುಕೊಂಡರೆ, ಬೇರೆ ಕಡೆಗೆ ಹೋದರೆ ಒಳ್ಳೆಯದು ನಮಗೆ ಸಂಪಾದನೆ ಬರುತ್ತದೆ ಎಂದು ಹೇಳುತ್ತಾರೆ. ಹೀಗಿರುವುದರಿಂದ ಸರ್ಕಾರದವರು ರೈತರ ಮತ್ತು ಜನಸಾಮಾನ್ಯರ ದೃಷ್ಟಿಯಿಂದ ಅವರಿಗೆ ನ್ಯಾಯ ಸುಲಭವಾಗಿ ದೊರಕುವಂತೆ ಮಾಡಬೇಕಾದುದು, ಅದರಲ್ಲಿಯೂ ಪ್ರಜಾಪ್ರಭುತ್ವ ಸರ್ಕಾರಕ್ಕೆ ಉತ್ತಮ ಮಾರ್ಗವೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ಶ್ರೀ ತಿಮ್ಮಪ್ಪಗೌಡರು ಮಾತನಾಡುತ್ತಾ ಕೋರ್ಟುಗಳು ಹತ್ತಿರವಿದ್ದರೆ ಜನರಿಗೆ ತೊಂದರೆ ಎಂದು ಹೇಳಿದರು, ಅಲ್ಲದೆ ಅರಸೀಕೆರೆಗೆ ಕೋರ್ಟು ಕೊಡುವುದರಲ್ಲಿ ಬಹಳ ವಿರೋಧವಿದೆ ಎಂದು ಹೇಳಿದರು. ಅವರು ಹೇಳುವುದು ಸರಿಯಲ್ಲ. ಕೋರ್ಟಿಲ್ಲದೆ ಅರಸೀಕೆರೆಯ ಜನರಿಗೆ ಬಹಳ ತೊಂದರೆಯಾಗಿದೆ. ಅರಸೀಕೆರೆ ತಾಲ್ಲೂಕಿನ ಒಂಬತ್ತು ಮೂಲೆಯಿಂದ ಹಾಸನಕ್ಕೆ ಹೋಗಿಬರಲು 65 ಮೈಲಿ ಆಗುತ್ತದೆ. ಅಷ್ಟು ದೂರ ರೈತ ಕೋರ್ಟಿನ ಕೆಲಸಕ್ಕಾಗಿ ಹೋಗಿಬರಬೇಕಾದರೆ ನಾಲ್ಕು ದಿವಸ ವಾಗುತ್ತದೆ. ಆದುದರಿಂದ ಅರಸೀಕೆರೆಗೆ ಕೋರ್ಟು ಅಗತ್ಯವಾಗಿ ಬೇಕು. ಮಲ್ಲಪ್ಪ ಸಮಿತಿಯವರು ಈ ರೀತಿ ಶಿಫಾರಸು ಮಾಡಿರುತ್ತಾರೆಂದು ನನ್ನ ಭಾವನೆ. ಶ್ರೀ ತಿಮ್ಮಪ್ಪಗೌಡರು ರಾಯರಾಗಿ ಮಾತನಾಡುತ್ತಾರೆ, ಅಷ್ಟೆ.

ಅಧ್ಯಕ್ಷರು.—ವೈಯಕ್ತಿಕ ಆರೋಪಣೆ ಮಾಡಬಾರದು.

ಶ್ರೀ ಬಿ. ಎ. ತಿಮ್ಮಪ್ಪಗೌಡ.—ಅವರು ವರ್ತಕರಾಗಿ ತಮಗೆ ಮನೆಬಾಡಿಗೆ ಬರುವ ದೃಷ್ಟಿಯಿಂದ ಹೇಳುತ್ತಾರೆಂದು ನಾನು ಹೇಳಬೇಕಾಗುತ್ತದೆ.

ಶ್ರೀ ಬಿ. ಚಿಕ್ಕಣ್ಣ.—ಪ್ರತಿಯೊಂದು ಊರಿನ ಜನರಿಗೂ ನ್ಯಾಯ ದೊರಕಬೇಕಾಗುತ್ತದೆ. ಆದ್ದರಿಂದ ಕೋರ್ಟುಗಳು ಎಷ್ಟು ಹತ್ತಿರ ಹತ್ತಿರವಿದ್ದರೆ ಅಷ್ಟೂ ಪ್ರಜೆಗಳಿಗೆ ಅನುಕೂಲ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ನಮ್ಮ ಕಡೂರು ತಾಲ್ಲೂಕಿಗೆ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟು ಬೇಕೆಂದು ಬಹು ಕಾಲದಿಂದಲೂ ಕೇಳಿಕೊಳ್ಳುತ್ತಿದ್ದೇವೆ. ಈ ತಾಲ್ಲೂಕಿನಲ್ಲಿ ಒಂದೂಕಾಲು ಲಕ್ಷ ಜನ ಸಂಖ್ಯೆ ಇದೆ. ಮಲ್ಲಪ್ಪ ಸಮಿತಿಯವರು ಬಂದಾಗ ಚಿಕ್ಕಮಗಳೂರು—ತರೀಕೆರೆ ಈ ಎರಡು ಕೋರ್ಟುಗಳಿಗೆ ಕಡೂರು ತಾಲ್ಲೂಕಿನ ಕೇಸುಗಳನ್ನು ಹಂಚಿದ್ದುದನ್ನು ಪರಿಶೀಲಿಸಿದರು. ಕಡೂರು ತಾಲ್ಲೂಕಿನ ಕೆಲವು ಪ್ರದೇಶಗಳಿಂದ ಅಲ್ಲಿಂದ ಹೋಗಿ ಬರಬೇಕಾದರೆ 60–70 ಮೈಲಿ ದೂರವಾಗುತ್ತದೆ. ಈ ತಾಲ್ಲೂಕಿನಲ್ಲಿ ರೈಲು ಮುಂತಾದ ವಾಹನ ಸೌಕರ್ಯವಿಲ್ಲ. ಆದುದರಿಂದ ಕೋರ್ಟು ಕಡೂರಿಗೆ ಕೊಡುವಂತೆ ಶಿಫಾರಸು ಮಾಡುತ್ತೇವೆಂದು ಸಮಿತಿಯವರು ಹೇಳಿದರು. ನಾವಾರು ಹತ್ತು ವರ್ಷಗಳಿಂದ ಕೇಳುತ್ತಿದ್ದೇವೆ. ನಾವಾರು ಎರಡು ವರ್ಷಗಳ ಹಿಂದೆ ಸಮಿತಿ ಮಾಡುತ್ತೇವೆ, ಅವರ ವರದಿ ಬಂದಮೇಲೆ ಯೋಚನೆಮಾಡುತ್ತೇವೆ' ಎಂದು ಹೇಳಿದ್ದರು. ಸಮಿತಿಯ ಶಿಫಾರಸಿನಲ್ಲಿ ಇರಲಿ ಇಲ್ಲದಿರಲಿ, ಕಡೂರು ತಾಲ್ಲೂಕಿಗೆ ಒಂದು ಮುನ್ಸೀಫ್ ಮ್ಯಾಜಿಸ್ಟ್ರೇಟು ಕೋರ್ಟನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನದು ಒಂದು ಸಲಹೆ ಇದೆ. ಮಲ್ಲಪ್ಪನವರ ಸಮಿತಿಯ ವರದಿಬಂದಿದೆ. ಇದು ನ್ಯಾಯಾಂಗಕ್ಕೆ ಸಂಬಂಧಪಟ್ಟ ಬಹು ಮುಖ್ಯ ವಿಷಯವಾದುದರಿಂದ ಆ ವರದಿಯನ್ನು ಈ ಸಭೆಯ ಮುಂದಿಟ್ಟು, ನಮ್ಮ ಗಮನಕ್ಕೆ ತಂದು ನಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ತೀರ್ಮಾನಕ್ಕೆ ಬರುವುದು ಉತ್ತಮವೆಂದು ನನ್ನ ಅಭಿಪ್ರಾಯ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈಗ ಜನರಿಗೆ ನ್ಯಾಯ ದೊರೆಯಬೇಕಾದರೆ ಬಹಳ ಕಷ್ಟ ಸಾಧ್ಯ. ಬಹಳ ಹಣಕೊಟ್ಟು ಕೊಂಡು ಕೊಳ್ಳುವಷ್ಟು ತೊಂದರೆಯಾಗಿದೆ. ಶ್ರೀ ದೇವರಾಜ ಅರಸಿನವರು ಹೇಳಿದಂತೆ ಹಿಂದಿನ ಕಾಲದಲ್ಲಿ ನಮ್ಮ ದೇಶದಲ್ಲಿ ಪಂಚಾಯಿತಿ ಸಂಸ್ಥೆಗಳು ನಡೆದುಕೊಂಡು ಬರುತ್ತಿದ್ದವು. ಇವು ನ್ಯಾಯ ತೀರ್ಮಾನ ಮಾಡುವ ಕಾರ್ಯವನ್ನು ನಿರ್ವಹಿಸುತ್ತಿದ್ದುದರಿಂದ ಹಳ್ಳಿಗಳಲ್ಲಿ ಯಾವ ಅನ್ಯಾಯವೂ ಆಗುವುದಕ್ಕೆ ಅವಕಾಶವಿರಲಿಲ್ಲ. ಹತ್ತು ಜನರ ಮಧ್ಯೆ ಬಿದ್ದ ಹಾವು ಸಾಯುವುದಿಲ್ಲ, ನ್ಯಾಯ ದೊರಕುತ್ತದೆ ಎಂಬ ಗಾದೆ ಇದೆ. ಹಾಗೆ ಯಾವಾಗಲೂ ಒಂದು ವ್ಯವಹಾರ ಊರಿನ ಮುಂದೆ ಬಂದರೆ ನ್ಯಾಯಕ್ಕೆ ಲೋಪ ಬರುವುದಿಲ್ಲ. ಏಕೆಂದರೆ, ಅಲ್ಲಿ ಸುಳ್ಳು ಸಾಕ್ಷಿ ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ನ್ಯಾಯವೆಲ್ಲಾ ರಾಯರುಗಳ ದಕ್ಷತೆ, ಎಪಿಡೆನ್ಸ್ ಮೇಲೆ ಹೋಗುತ್ತದೆ. ಅನೇಕ ನ್ಯಾಯಾಧೀಶರು ತೀರ್ಮಾನ ಕೊಡುವಾಗ remark ಮಾಡಿ, ಪೋಲೀಸಿನವರ investigation ತಪ್ಪು ದಾರಿಯಲ್ಲಿ ನಡೆದಿರುವುದರಿಂದ ತಪ್ಪಿತಸ್ಥನನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲವೆಂದು ಬರೆದಿರುತ್ತಾರೆ. ನಿಜವಾಗಿ ತಪ್ಪು ಸಾಬೀತಾದರೂ ಕೂಡ ಕಾನೂನು ಹಿಡಿತಕ್ಕೆ ಬರದೆಹಾಗೆ ಅಪರಾಧಿ ತಪ್ಪಿಸಿಕೊಳ್ಳುವುದಕ್ಕವಕಾಶವಾಗಿದೆ. ಹೀಗೆಯೇ ಸುಳ್ಳು ಸಾಕ್ಷ್ಯಗಳನ್ನು ಕೊಟ್ಟು ನಿರಪರಾಧಿಯನ್ನು ಶಿಕ್ಷೆಗೊಳಪಡಿಸುವುದಕ್ಕೂ ಈಗಿನ ವ್ಯವಸ್ಥೆಯಲ್ಲಿ ಅವಕಾಶವಿದೆ. ಆದುದರಿಂದ ಹಿಂದಿನ ಕಾಲದಲ್ಲಿದ್ದಂತೆ ಗ್ರಾಮಗಳೇ ಪಂಚಾಯಿತಿ ನಡೆಸುವ ಹಾಗೆ ಮಾಡಿದರೆ ನಿಶ್ಚಾಂತ ಹೊರಗೆ ಬಂದು ನ್ಯಾಯ ದೊರೆಯುತ್ತದೆ. ಸ್ಥಳದ ವಿದ್ಯಮಾನಗಳು ಗೊತ್ತಿರುತ್ತವೆ. ಆದಕಾರಣ ಅವರೇ ಸಾಕ್ಷ್ಯಗಳನ್ನು ಕೇಬರಿಸಿ

ತೀರ್ಮಾನ ಮಾಡಲು ಪಂಚಾಯತಿಗಳಿಗೆ ಅವಕಾಶ ಕೊಡಬೇಕು. ಈಗಾಗಲೇ ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಪಂಚಾಯತಿಗಳಿಗೇ ಈ ಅಧಿಕಾರ ವನ್ನು ಪಹಿಸಿದ್ದಾರೆ. ಹೀಗೆ ಮಾಡಿದರೆ ಅದು ಈಗಿನ ರಾಜ್ಯಾಂಗಕ್ಕನುಗುಣವಾಗಿ, ಸಾಧ್ಯವಾದ ಮಟ್ಟಿಗೂ, ಪ್ರಜಾಪ್ರಭುತ್ವಕ್ಕನುಗುಣವಾಗಿರುತ್ತದೆ, ನ್ಯಾಯವೂ ಸುಲಭವಾಗಿ ದೊರೆಯುತ್ತದೆ. ಈ ವಿಷಯವನ್ನು ಆಮೂಲಾಗ್ರವಾಗಿ ಪರಿಶೀಲಿಸಿ ವ್ಯವಸ್ಥೆ ಮಾಡ ಬೇಕೆಂದು ಒತ್ತಾಯ ಮಾಡುತ್ತೇನೆ.

4 P.M.

ಶ್ರೀ ಇಜಾರಿ ಸಿರನಪ್ಪ (ಹರಪನಹಳ್ಳಿ).—ಸ್ವಾಮಿ, ನ್ಯಾಯಾಂಗದ ಸಂಬಂಧವಾಗಿ ಬಳ್ಳಾರಿ ಜಿಲ್ಲೆಯಲ್ಲಿ ವಿಶೇಷ ಕಷ್ಟಪರಿಸ್ಥಿತಿ ಇರುವ ಒಂದೆರಡು ವಿಚಾರ ಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ನಾನು ತರಬಯ ಸುತ್ತೇನೆ. ನಿಮಗೆ ಗೊತ್ತಿರುವಂತೆ ಮದ್ರಾಸ್‌ನಲ್ಲಿ Judicial ಮತ್ತು Executive ಬೇರೆಬೇರೆಯಾಗಿ ಈಗ 4—5 ವರ್ಷಗಳಾದುವು. ಈ ರೀತಿ ಬೇರೆ ಮಾಡಿದ ಕಾಲಕ್ಕೆ ಮದ್ರಾಸ್ ಸರ್ಕಾರದವರು ಮದ್ರಾಸ್ Public Service Commissionನವರು ಮತ್ತು ಮದ್ರಾಸಿನ ಹೈಕೋರ್ಟ್‌ನವರು ಕೆಲವು ರೂಲ್‌ಗಳನ್ನು ಮಾಡಿ ಅದರ ಪ್ರಕಾರ direct recruitmentನ ಮೂಲಕ ಮತ್ತು ಇತರ ಇಲಾಖೆಗಳಿಂದ Law Graduates ಗಳನ್ನು Sub Magistrate ಮತ್ತು Munsiff ಆಗಿ ನೇಮಕ ಮಾಡಿರುವುದು ನಮಗೆಲ್ಲರಿಗೂ ಗೊತ್ತಿದೆ.ಅವರು ಹಾಕಿದ ರೂಲುಗಳಲ್ಲಿ double graduates ಎಂದು ನಿರ್ದಿಷ್ಟವಾಗಿ ಹೇಳಿಲ್ಲ. ಬರೀ Law Graduates ಆಗಿದ್ದರೆ Sub Magistrate ಮತ್ತು Munsiff ಆಗಿ ನೇಮಕ ಮಾಡಬಹುದು.

Sri A. BHEEMAPPA NAIK.—That is the very point on which there is a writ in the High Court.

Mr. SPEAKER.—In that case you must avoid all those references.

ಶ್ರೀ ಇಜಾರಿ ಸಿರನಪ್ಪ.—I have no objection to that. ಸಾಮಾನ್ಯವಾಗಿ ಬಳ್ಳಾರಿ ಕೋರ್ಟುಗಳಲ್ಲಿ ಈಗ ಸಾಕ್ಷಿಗಳನ್ನು ಕರೆದುಕೊಂಡು ಬಂದವರಿಗೆ ಭತ್ಯಕೊಡುವುದು ನಿಧಾನವಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಭತ್ಯಗಳನ್ನು ಕೊಡುವುದಿಲ್ಲವೆಂದು ನಮ್ಮ ಜಿಲ್ಲೆಯಲ್ಲಿ ತಕರಾರು ಮಾಡುತ್ತಿದ್ದಾರೆ. Prosecution side ನಲ್ಲಿ ಸರ್ಕಾರದವರು ಇದ್ದಾಗ, ಪೋಲೀಸಿನವರಾಗಲ ಸಂಬಂಧಿಸಿದ ಅಧಿಕಾರಿ ಗಳಾಗಲ ಸಾಕ್ಷಿಗಳನ್ನು ಭತ್ಯ ಕೊಡದೆ ಕರೆದುಕೊಂಡು ಬರುವುದು ಬಹುಶಃ ಬಹಳ ಕಷ್ಟವಾಗುತ್ತದೆ Defence ನವರಿಗೆ ಸ್ವಂತ ಖರ್ಚಿನಿಂದ ಸಾಕ್ಷಿಗಳನ್ನು ಕರೆದುಕೊಂಡು ಬರುವುದು ಸುಲಭ. ಆದ್ದರಿಂದ ಈಗ ಭತ್ಯ ಕೊಡದೆ Prosecution sideನಲ್ಲಿ ಸಾಕ್ಷಿ ಗಳನ್ನು ಕರೆದುಕೊಂಡು ಬರುವುದು ಬಹಳ ದುಸ್ತರ ವಾಗಿದೆ. ಎಲ್ಲಾ ಸರಕಾರದ ಕೇಸುಗಳೂ ಸಾಕಷ್ಟು evidence ಇಲ್ಲದೆ ಬಿದ್ದು ಹೋಗುವ ವಿಚಾರವಾಗಿ ಅನೇಕ ಸಲ ಸರ್ಕಾರದಲ್ಲಿ ಮನವಿಗಳನ್ನೂ ಸಹ ಮಾಡಿ ಕೊಂಡಿದ್ದಾರೆ. ಸರ್ಕಾರದವರು ಇದಕ್ಕೆ ಸೂಕ್ತ ಪರಿ ಹಾರವನ್ನು ಜಾಗ್ರತೆಯಾಗಿ ಸೂಚನೆಮಾಡುವರೆಂದು ನನ್ನ ನಂಬಿಕೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸಂಸ್ಥಾನದಲ್ಲಿ ಕೋರ್ಟುಗಳನ್ನು ಸ್ಥಾಪನೆಮಾಡತಕ್ಕಂಥ ವಿಚಾರದಲ್ಲಿ ಶ್ರೀ ಮಲ್ಲಪ್ಪನವರ ನೇತೃತ್ವದಲ್ಲಿ ಒಂದು ಸಮಿತಿ ಏರ್ಪಾಡಾಗಿತ್ತು. ಆ ಸಮಿತಿ ಸದಸ್ಯರು ಸಂಸ್ಥಾನದ ನಾನಾಕಡೆ ಸಂಚಾರಮಾಡಿ ಕೊರ್ಟುಗಳನ್ನು ಎಲ್ಲೆಲ್ಲಿ ಸ್ಥಾಪನೆ ಮಾಡಬೇಕು ಎಂಬ ಬಗ್ಗೆ ಶಿಫಾರ್ಸನ್ನು ಕಳು ಹಿಸಿದ್ದಾರೆ. ಮಾಗಡಿ ಮತ್ತು ನೆಲಮಂಗಲ ಸೇರಿಸಿ ಒಂದು ಕೋರ್ಟು ಕೊಡಿಸಿಕೊಡಬೇಕೆಂದು ರಿಪೋರ್ಟ್‌ನಲ್ಲಿ ಸೇರಿಸಿದ್ದಾರೆ. ಈಗ ಮಾಗಡಿಯಲ್ಲಿ ಇರತಕ್ಕಂಥ ಕ್ರಿಮಿನಲ್ ಕೇಸುಗಳನ್ನು ತೆಗೆದುಕೊಂಡು ರಾಮನಗ ರಕ್ಕೂ ನೆಲಮಂಗಲದ ಕೇಸುಗಳನ್ನು ದೊಡ್ಡಬಳ್ಳಾ ಪುರಕ್ಕೂ ತೆಗೆದುಕೊಂಡು ಹೋಗುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ತಾವು ಹೇಳತಕ್ಕಂಥ ವರದಿ ಪ್ರಕಟಣೆ ಆಗಿದೆಯೇ?

ಅಧ್ಯಕ್ಷರು.—ಇಲ್ಲ.

ಶ್ರೀ ಡಿ. ದೇವರಾಜ್ ಅರಸ್.—ನೋಡಿದ ಹಾಗೆ ಹೇಳುತ್ತಿದ್ದೀರಿ.

ಶ್ರೀ ಎಸ್. ಸಿದ್ದಪ್ಪ.—ಸಂಸ್ಥಾನದಲ್ಲಿ ಕೋರ್ಟುಗಳ ಪುನರ್ರಚನೆ ಬಹಳ ಅಗತ್ಯ. ಪ್ರಜೆಗಳಿಗೆ ಅನುಕೂಲವಾದ ರೀತಿಯಲ್ಲಿ ಕೊರ್ಟುಗಳನ್ನು ಸ್ಥಾಪನೆಮಾಡಿ ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು. ಕನಿಷ್ಠ ಪಕ್ಷ ಒಂದು ವರ್ಷದೊಳಗೆ ಕ್ರಿಮಿನಲ್ ಮತ್ತು ಸಿವಿಲ್ ಕೇಸುಗಳು ಫೈನಲ್ ಆಗುವ ಹಾಗೆ ಮಾಡಬೇಕು. ಈಗ 5 ವರ್ಷಗಳಾದರೂ ಕೂಡ ಫೈನಲ್ ಆಗುತ್ತಾ ಇಲ್ಲ. ನ್ಯಾಯಸಿಕ್ಕುತ್ತಾ ಇಲ್ಲ. ಎಷ್ಟೋ ಸಾಕ್ಷಿಗಳು ಇರು ವುದೂ ಇಲ್ಲ, ಈ ರೀತಿ Process summons ಕೋರ್ಟಿನಲ್ಲಿ ಸರಿಯಾಗಿ ವಿಚಾರ ಆಗುತ್ತಾ ಇಲ್ಲ. ಆದ್ದ ರಿಂದ ನ್ಯಾಯ ಕೆಟ್ಟಿನ ರೀತಿಯಲ್ಲಿ ಜನರಿಗೆ ದೊರಕು ವಂತೆ ಕೋರ್ಟುಗಳು ಎಲ್ಲಾ ಕಡೆಯೂ ಇರುವಂತೆ ವ್ಯವಸ್ಥೆ ಮಾಡಬೇಕು. ಕಮಿಟಿ ರಿಪೋರ್ಟ್ ಬಂದ ನಂತರ ತಕ್ಷಣ ಮಾಗಡಿ ನೆಲಮಂಗಲವನ್ನು ಸೇರಿಸಿ ಅಲ್ಲಿಗೆ ಒಂದು ಕೋರ್ಟ್ ಕೊಡಿಸಿಕೊಡಬೇಕೆಂದು ನಾನು ಒತ್ತಾಯಮಾಡುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಹೊಸ ಕೋರ್ಟುಗಳ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕಾದ ಅವಶ್ಯಕತೆ ಕಂಡು ಬಂದಿದೆ. ಈಗಿರುವ ಸ್ಥಿತಿಯೊಳಗೆ ಕೆಲವು ಕೋರ್ಟುಗಳಲ್ಲಿ ಕೆಲಸ ಹೆಚ್ಚಾಗಿದೆ. ಕೆಲಸ ಇಲ್ಲದೇ ಇರುವ ಕೋರ್ಟುಗಳೂ ಇವೆ. ಆದ್ದರಿಂದ ತಮ್ಮೆಲ್ಲರ ಸಲಹೆ ಪಡೆದು ಎಲ್ಲೆಲ್ಲಿ ಕೋರ್ಟು ಗಳನ್ನು ನಿರ್ಪಡಿಸಿದರೆ ಅವಕ್ಕೆ ಎಷ್ಟೆಷ್ಟು ಕೆಲಸವಿರು ತ್ತದೆ ಎಂಬ ಬಗ್ಗೆ ಜಸ್ಟಿಸ್ ಮಲ್ಲಪ್ಪನವರಿಂದ ರಿಪೋರ್ಟ್ ಬಂದಿದೆ. ಅದನ್ನು ಈಗ Cabinet ಮುಂದೆ ಇಟ್ಟಿದ್ದೇನೆ. ಇದನ್ನು publish ಮಾಡಿ ಜನಾಭಿಪ್ರಾಯ ಪಡೆದು ಮುಂದುವರಿಸಬೇಕೆಂದು ಇದ್ದೇವೆ.

Sri K. PATTABHIRAMAN (Kolar).—Sri M. Chickalingiah asked you whether you will place that Report before this House and seek its opinion. Is there any difficulty?

Sri A. G. RAMACHANDRA RAO.—I have put it before the Cabinet. I have put up the matter both for publication as well as for a discussion, if that is necessary and desirable. The Cabinet will take a decision. ಕೋರ್ಟುಗಳ ಸ್ಥಾಪನೆಯ ವಿಚಾರದಲ್ಲಿ ಈ ರಿಪೋರ್ಟಿನ ಮೇಲೆ ತೀರ್ಮಾನಕ್ಕೆ ಬಂದ ಮೇಲೆ ಇಲ್ಲಿ ಚರ್ಚೆಮಾಡಿ

(Sri A. G. Ramachandra Rao.)

ತೀರ್ಮಾನಕ್ಕೆ ಬರುವುದು ಸೂಕ್ತ ಎಂದು ಕಾಣುತ್ತದೆ. ಇನ್ನೂ ಇದಕ್ಕೆ ಸಂಬಂಧಿಸಿದ ಹಾಗೆ separation of Judiciary from Executive ಎಂದು ಇರುತ್ತದೆ. ಏತಕ್ಕೆಂದರೆ separation ಆದರೆ ಅನೇಕ ಕಡೆ ಡಿಸ್ಟ್ರಿಕ್ಟ್ ಕೋರ್ಟ್‌ಗಳು ಅನಿವಾರ್ಯವೆಂದು ಕಾಣುತ್ತದೆ.

Sri K. PATTABHIRAMAN.—On a point of clarification, Mr. Speaker. While we are on the question of separation of the Judiciary from the Executive, the set-up or the outline or the plan that the Government have is a very material question. In fact, in the sister State of Madras, a broad scheme had been worked out. I remember, when Sri K. T. Bhashyam was the Law Minister of Mysore Government, he wanted to give a certain outline of this separation. What exactly is in the mind of this Government is an all important question and if they can take us into their confidence, that is what we would like to know.

Sri A. G. RAMACHANDRA RAO.—We have put forward a scheme of separation which we want to do as early as possible. In fact if Mallappa Committee Report had come earlier, and if that writ application which is before the High Court had not come up, probably, by this time we would have taken action and placed that scheme before this Hon'ble House. We have been, in a sense, constrained to put it off. I am saying this because some Hon'ble Members expressed whether the the intention expressed by the Hon'ble the Chief Minister and myself earlier had any seriousness at all. I wish to assure the House that what has been said before was said in all seriousness and sincerity and we want to implement it as early as possible.

Sri Mulka GOVINDA REDDY.—How does the writ petition hinder the announcement of the outline of the plan regarding the separation of Judiciary from the Executive?

Sri A. G. RAMACHANDRA RAO.—Sir, at any rate, everybody could easily envisage that there would be additional number of courts and additional number of judges would be necessary. For instance, if we are to divest the District Magistrates of their powers, there must be some agency to take up their work and we have calculated in a very rough manner the necessity of having District Courts in all the Districts and a District Court in every District means Additional District Judges also. One suggestion is that sub-judges wherever they are may be stepped up; in order to step themup there must be some other men to replace them. So the thing goes on. This position could be summarised, namely, additional number of judges would be necessary to implement this scheme and if you want additional number of judges, even commencing from the bottom, we want additional number of munsiffs and for that recruitment is necessary. We have taken a long step and made calculations but all of a sudden this writ petition had come in and we have been constrained to put off the scheme. Further, the Mallappa Committee Report is also in the way in the sense that the Report envisages the establishment of courts in several places. That also, I am afraid, would add to the strength of the Judiciary. For this purpose, further recruitment would be necessary. Immediately the writ application is settled, by which time I hope the Report of the Mallappa Committee also will be in the hands of the Members, the matter could be discussed and a very early decision taken in the matter. I once again assure the House that the Government are very serious and sincere in implementing this separation of the Judiciary from the Executive.

Next, Sir, regarding copyists, the question was raised whether we should go back to the original method of work when they did not receive any salary but they worked as it were on piece-wage system and every man got remuneration according to the work turned out.

ಸ್ವಾಮಿ, copyist ಗಳ ವಿಷಯ ಪ್ರಸ್ತಾಪ ಮಾಡಿದ್ದಾರೆ. ಹಿಂದೆ copyಗಳನ್ನು ಬರೆದರೆ examinerಗೆ ಇಷ್ಟು, ಕಾಪಿಗಳನ್ನು ಬರೆದವರಿಗೆ ಇಷ್ಟು ಎಂದು ಹಂಚುತ್ತಿದ್ದರು. ಚೆನ್ನಾಗಿ ಕಷ್ಟಪಟ್ಟು ಕೆಲಸ ಮಾಡುವವರಿಗೆ ವರಮಾನವಿತ್ತು. ಆದರಿಂದ ಉತ್ಪ್ರೇಜನಬಂದ ಕೆಲಸ ಮಾಡುತ್ತಿದ್ದರು. ಆದರೆ ಸಂಬಳ ತೆಗೆದುಕೊಂಡರೆ ಅವರಿಗೆ ಅದರಿಂದ ಅನುಕೂಲವಾಗುತ್ತದೆ ಎಂದು ಒಂದು ಭಾರೀ ಚಳವಳಿಯನ್ನು ಎಬ್ಬಿಸಿ ಆ ರಿಯಾಯಿತಿ ಪಡೆದುಕೊಂಡರು. ಈಗ ಮಾನ್ಯ ಸದಸ್ಯರು ಹೇಳಿದ ರೀತಿಯೊಳಗೆ ಲಾಯರುಗಳಿಗೆ ತೊಂದರೆ ಆಗಿರುವುದು ನಿಜ. ಅನೇಕರು ಹಿಂದಿನ ಪದ್ಧತಿ

ಹೋದರೆ ಅವರಿಗೆ ಈಗ ಬರತಕ್ಕ ವರಮಾನ ಬರುತ್ತದೋ ಇಲ್ಲವೋ ಎಂಬ ಅನುಮಾನದಿಂದ ಇದಕ್ಕೆ ವಿರೋಧವಾಗಿದ್ದಾರೆ. ಈ ವಿಚಾರದಲ್ಲಿ High Courtನ್ನು ಕೇಳಿದ್ದೆವು. 1949ನೇ ಇಸವಿ ಜನವರಿ 1ನೇ ತಾರೀಖಿನಲ್ಲಿ, ಇನ್ನೂ ಸ್ವಲ್ಪಕಾಲ ನೋಡಿ ತೀರ್ಮಾನ ಮಾಡುವುದು ಉತ್ತಮವೆಂದು ಅವರು ಜವಾಬು ಬರೆದರು. ನಾವು ಪುನಃ ಬರೆದಿದ್ದೇವೆ. ಇಲ್ಲಿ ಇದರ ಬಗ್ಗೆ ನಡೆದ proceedingsನ್ನೂ ಕೂಡ ಅವರಿಗೆ ಕಳುಹಿಸಿ ಕೊಡುತ್ತೇವೆ. ಎರಡನೆಯ ದರ್ಜೆ ಗುಮಾಸ್ತರ ಸಂಬಳ ಇವರಿಗೆ ಕೊಟ್ಟರೆ ಇವರು ಇನ್ನೂ ಜಾಗ್ರತೆ ಕೆಲಸ ಮಾಡುತ್ತಾರೆಂದು ಶ್ರೀ ದೇವರಾಜ್ ಅರಸ್‌ರವರು ಹೇಳಿದರು. ಆದರೆ ಅನೇಕರಿಗೆ ಎರಡನೆ ದರ್ಜೆಗೆ ಏನು qualification ಇರಬೇಕೋ ಅದು ಇಲ್ಲ ಎಂಬುದನ್ನು ಮರೆತು ಬಿಟ್ಟಿದ್ದಾರೆ. ಎರಡನೆ ದರ್ಜೆ ಗುಮಾಸ್ತರಿಗೆ S.S.L.C. Pass ಆಗಿರಬೇಕು. ಅನೇಕ copyistಗಳಿಗೆ ಆ qualification ಇಲ್ಲ. ಆದ್ದರಿಂದ ಇದನ್ನು ಅವರಿಗೆ ಅನ್ವಯಿಸುವುದು ಕಷ್ಟವಾಗುತ್ತದೆ. ಹಾಗೂ ಇಲ್ಲಿ ಆಗಿರತಕ್ಕಂಥ ಚರ್ಚೆಯನ್ನು ಹೈಕೋರ್ಟ್‌ಗೆ ಕಳುಹಿಸಿ ಅವರು ಯಾವರೀತಿ ಅಭಿಪ್ರಾಯ ಪಡುತ್ತಾರೆಂಬುದನ್ನು ತಿಳಿದುಕೊಳ್ಳುತ್ತೇವೆ. ಮುಖ್ಯವಾಗಿ last sessionನಲ್ಲಿ writ application ವಗೈರೆ ತಡವಾಗುತ್ತಿದೆ ಎಂದು ಹೇಳಿದರು. ಇದರ ವಿಚಾರ ಹೆಚ್ಚಿಗೆ ಟೀಕೆ ಮಾಡುವುದು ಸೂಕ್ತವಲ್ಲವೆಂದು ಕಾಣುತ್ತದೆ. ಇಷ್ಟರತಕ್ಕ ಅಭಿಪ್ರಾಯವನ್ನು ಹೈಕೋರ್ಟ್‌ಗೆ ಕಳುಹಿಸಿ ಕೊಡುತ್ತೇವೆ. High Courtನಲ್ಲಿ ಖಾಲಿ ಇರುವ ಜಾಗಗಳನ್ನು ಭರ್ತಿಮಾಡಲು delay ಆಗಿದೆಯೆಂದು ಒಂದು ಆಪಾದನೆ ಬಂದಿದೆ.

Sri Mulka GOVINDA REDDY.—Plausible explanation.

ಶ್ರೀ ಎ. ಜಿ. ರಾಮಚಂದ್ರ ರಾವ್.—ಆ ಊಹೆಗೆ ಬುಡವಿಲ್ಲ, ಆಧಾರವಿಲ್ಲವೆಂದುಮಾತ್ರ ಹೇಳುತ್ತೇವೆ. ಎರಡುಸ್ಥಾನ ಖಾಲಿಇದ್ದ ಪೈಕಿ ಒಂದು fill up ಆಗಿದೆ. ಇನ್ನೊಂದರ ಬಗ್ಗೆ Supreme Courtನ ಜೊತೆಗೆ ವ್ಯವಹಾರ ನಡೆಯುತ್ತಿದೆ. ನಾ ಯಾಂಗದಲ್ಲಿ ಹರಿಜನರಿಗೆ ಸರಿಯಾದ ಪ್ರಾತಿನಿಧ್ಯ ಕೊಡಬೇಕು, ಅದು ಅವರಿಗೆ ಸಿಕ್ಕಿಲ್ಲ. ಹಿಂದೆ ಒಂದು ನ್ಯಾಯವಾದ ಕಾರಣದಿಂದ ಅವರಿಗೆ ಸಿಕ್ಕದೆ ಇದ್ದರೂ ಈಗ ಅವಕಾಶ ಹೆಚ್ಚಿಗೆ ಮಾಡಲು ರಿಯಾಯಿತಿ ಕೊಡಬೇಕೆಂದು ಒತ್ತಾಯ ಪಡಿಸಿದ್ದಾರೆ. ಮಾನ್ಯ ಸದಸ್ಯರು ಈಗ ಮಾಡಿರತಕ್ಕಂಥ ರೂಲ್ಸ್‌ಗಳ ವಿಷಯದಲ್ಲಿ ಪ್ರವೇಶ ಮಾಡತಕ್ಕದ್ದು ಸೂಕ್ತವಲ್ಲವೆಂದು ಹೇಳುವುದಿಲ್ಲ. ಅದನ್ನು ಪರಿಶೀಲನೆ ಮಾಡಿದರೆ ಆ ವಿಷಯದಲ್ಲಿ ಸರ್ಕಾರದ ಧೋರಣೆ ಮತ್ತು ಆಸಕ್ತಿ ಪೂರ್ಣವಾಗಿ ಕ್ರಿಂದು ಅರ್ಥವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—High Court Judgeಗಳ ವಿಷಯದಲ್ಲಿ Communal ತತ್ವ್ಯತರ ಬೇಡಿ.

Mr. SPEAKER.—We cannot discuss the constitution or the organisation of the High Court.

Sri A. G. RAMACHANDRA RAO.—I am coming to the representation of Harijans in the Judiciary. ಸರ್ಕಾರಕ್ಕೆ ಹರಿಜನರಿಗೆ ನ್ಯಾಯ ದೊರಕಿಸಿಕೊಡಬೇಕೆಂಬುದರಲ್ಲಿ ಎಷ್ಟು ಆಸಕ್ತಿ ಮತ್ತು ತೀವ್ರತೆ ಇದೆ ಎಂಬುದನ್ನು ರೂಲ್ಸ್ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಗಮನದಲ್ಲಿದೆ ತಾನೇ?

ಶ್ರೀ ಎ. ಜಿ. ರಾಮಚಂದ್ರ ರಾವ್.—ನೀವು ಬೇಕಾದರೆ ವಯಸ್ಸನ್ನು 35 ಅಲ್ಲದಿದ್ದರೆ 40 ಆದರೂ ಮಾಡಿಕೊಳ್ಳಬಹುದು. Qualification ಇಲ್ಲದೆ ಇದ್ದರೂ ಕೊಡಿ ಎಂದರೆ ಏನು ಪರಿಣಾಮವಾಗುತ್ತದೆಯೆಂಬುದನ್ನು ನೀವೇ ಯೋಚನೆಮಾಡಿ.

ಶ್ರೀ ಬಿ. ರಾಚಯ್ಯ.—ದಕ್ಷತೆಯಿಲ್ಲದಿರುವವರನ್ನು ನೇಮಕಮಾಡಿ ಎಂದು ನಾವು ಕೇಳುತ್ತಿಲ್ಲ. ವಯಸ್ಸು, ಸರ್ವಿಸ್ ಮುಂತಾದುವುಗಳಲ್ಲಿ ರಿಯಾಯಿತಿ ಕೊಡಿ ಎಂದು ಮಾತ್ರ ನಾವು ಕೇಳುವುದು.

ಶ್ರೀ ಎ. ಜಿ. ರಾಮಚಂದ್ರ ರಾವ್.—ಇದು ಒಂದು Technical ಕೆಲಸ. ಬಾಕಿ ಟೆಕ್ನಿಕಲ್ ಇಲಾಖೆಗಳಂತೆ ಈ ಇಲಾಖೆಯಲ್ಲೂ ಪಾರಿಭಾಷಿಕ ಜ್ಞಾನ ಅವಶ್ಯಕ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಿಂದೆ ಮುನಿಸೀಫರುಗಳನ್ನು ಚುನಾವಣೆ ಮಾಡುವಾಗ Barನಲ್ಲಿ ಮೂರು ವರ್ಷ ಸರ್ವಿಸ್ ಇದ್ದವರಿಗೆ ಕೊಡಬೇಕೆಂದಿತ್ತು. ಹರಿಜನರು ಸ್ವಲ್ಪ ಓದಿ ಮುಂದಕ್ಕೆ ಬರುವಹೇಳಿಗೆ ಈ ಅವಧಿಯನ್ನು ನಾಲ್ಕು ವರ್ಷಕ್ಕೆ ಹೆಚ್ಚಿಸಿದ್ದಾರೆ. ಇಂಥದರ ವಿಷಯದಲ್ಲಿ ಸ್ವಲ್ಪ ರಿಯಾಯಿತಿ ಕೊಡಬೇಕೆಂದು ನಾವು ಕೇಳುವುದು.

ಶ್ರೀ ಎ. ಜಿ. ರಾಮಚಂದ್ರ ರಾವ್.—ಟೆಕ್ನಿಕಲ್ ಅರ್ಹತೆಯ ವಿಚಾರದಲ್ಲಿ ಎಷ್ಟರ ಮಟ್ಟಿಗಿರಬೇಕೆಂಬುದನ್ನು ನೀವೇ ನೋಡಿಕೊಳ್ಳಬಹುದು. ಅನ್ಯತ್ರಯಲ್ಲಿ ಡಾಕ್ಟರುಗಳಿಗೆ ಸರಿಯಾದ ಅರ್ಹತೆಯಿಲ್ಲದಿದ್ದರೆ ಪರಿಣಾಮವೇನಾಗುತ್ತದೆಯೆಂಬುದು ಕೂಡಲೇ ಗೊತ್ತಾಗುತ್ತದೆ. ಎಂಜಿನಿಯರಿಂಗ್ ಇಲಾಖೆಯಲ್ಲಿ ಅನುಭವವಿಲ್ಲದಿರುವವರು ಕೆಲಸ ಮಾಡಿದ್ದರ ಪರಿಣಾಮ ಏನಾಗಿದೆಯೆಂದು ಆಗಲೇ ನಮಗೆ ಗೊತ್ತಾಗಿದೆ. ಜ್ಯುಡಿಷಿಯರಿಯಲ್ಲಿಯೂ ಹಾಗೆಯೇ ಸರಿಯಾದ ಕಾನೂನು, ವ್ಯವಹಾರಗಳ ಜ್ಞಾನ, ಅನುಭವವಿಲ್ಲದಿದ್ದರೆ ಯಾವು ದೊಂದಕ್ಕೂ ಪರಾವಲಂಬಿಯಾಗಿ ಜಡ್ಜ್‌ಮೆಂಟ್ ಕೊಡಬೇಕಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಿದ್ದೀರಲ್ಲಾ, ಅವರು ಹೇಗೆ ಕೆಲಸ ಮಾಡುತ್ತಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರ ರಾವ್.—ಅದಕ್ಕೇ ಪಬ್ಲಿಕ್ ಪ್ರಾಸಿಕ್ಯೂಟರ್ ಕೆಲಸವನ್ನು ಸರ್ಕಾರದವರು ಕೊಟ್ಟರು. ಅವರೂ ಒಪ್ಪಿಕೊಂಡರು. ಇನ್ನೂ ಹೀಗೆಯೇ ಅವಕಾಶ ಬಿದ್ದಹಾಗೆಲ್ಲಾ ಹರಿಜನರಿಗೆ ಕೊಡಬೇಕೆಂಬುದರಲ್ಲಿ ಸರ್ಕಾರದವರಿಗೂ ಮಾನ್ಯ ಸದಸ್ಯರಿಗೂ ಭಿನ್ನಾಭಿಪ್ರಾಯವಿಲ್ಲ.

ಆಮೇಲೆ, ಕೋರ್ಟ್ ವ್ಯವಹಾರಗಳಲ್ಲಿ, ಕನ್ನಡದಲ್ಲೇ ಸಾಕ್ಷ್ಯವನ್ನು ತೆಗೆದುಕೊಳ್ಳಬೇಕು, ಕನ್ನಡದಲ್ಲೇ ಬರೆದುಕೊಳ್ಳಬೇಕು, ಕನ್ನಡದಲ್ಲಿಯೇ ಸಾಕ್ಷಿಗಳಿಗೆ ಓದಿ ಹೇಳಬೇಕು ಎಂಬುದು ನ್ಯಾಯವಾಗಿದೆ. ಈ ವಿಚಾರವನ್ನೂ ಕೂಡ ಹೈಕೋರ್ಟಿನ ಅವಗಾಹನೆಗೆ ಕಳುಹಿಸಿ ಕೊಡುತ್ತೇವೆ.

ಕೊನೆಯದಾಗಿ ಸಿವಿಲ್ ಸ್ಟೇಷನ್ನಿನ Barಗೆ ಲೈಬ್ರರಿ, ಫರ್ನಿಚರ್‌ಗಳ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿದರು. ಈಚೆಗೆ ಸಿವಿಲ್ ಸ್ಟೇಷನ್ನಿನ ಬಾರ್‌ನಲ್ಲಿ ನಡೆಯುತ್ತಿದ್ದ ಕೆಲಸಕಾರ್ಯಗಳೆಲ್ಲವನ್ನೂ Cityಯಲ್ಲಿನ Barಗೇ ಸೇರಿಸಿದ್ದೇವೆ. More or less membership is common. ಇದರ ಮೇಲೆ, ಒಂದು ಕಡೆಯಾದರೂ ಎಲ್ಲಾ ಪುಸ್ತಕಗಳ ಅನುಕೂಲತೆಯಿರಲಿ ಎಂದು Cityಯಲ್ಲಿರುವ Barನಲ್ಲಿ ಎಲ್ಲಾ ಏರ್ಪಾಡುಗಳನ್ನೂ ಮಾಡಿದ್ದಾಗಿದೆ. ಇನ್ನು ಈಗ ಸಿವಿಲ್ ಸ್ಟೇಷನ್ನಿನಲ್ಲಿಯಾ ಏರ್ಪಾಡು ಮಾಡಬೇಕು

(ಶ್ರೀ ಎ. ಜಿ. ರಾಮಚಂದ್ರರಾವ್.)

ಎಂದರೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರೇ ಯೋಚನೆಮಾಡಬಹುದು. ಈಗ Courtಗಳ Re-organisation ಮಾಡಬೇಕೆಂದು ಬೇರೆ ಏರ್ಪಾಡುಗಳು ನಡೆಯುತ್ತಿವೆ. ಇದು ಯಾವ ರೀತಿಯಾಗುತ್ತದೆಂಬುದನ್ನು ನೋಡಿಕೊಂಡು ಆಮೇಲೆ ಅವಶ್ಯಕತೆ ಬಿದ್ದರೆ ನೋಡಬಹುದು. ಅಲ್ಲದೆ, ಈಗ ಸದ್ಯಕ್ಕೆ ಅಷ್ಟಾದರೂ ತೊಂದರೆಯಾಗದಿರಲಿ ಎಂದು ಸಿವಿಲ್ ಸ್ಟೇಷನ್ನಿನ Bar ನವರಿಗೆ ಒಂದು most beautiful hallನ್ನು ಕೊಟ್ಟಿದ್ದೇವೆ.

ಆಮೇಲೆ ಸಾಕ್ಷಿಗಳಿಗೆ ಭಕ್ಷ್ಯ ಕೊಡುವುದು. ಈ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡುವುದು ಬಹಳ ಅಗತ್ಯವಿದೆ. ಇನ್ನೂ ಸರ್ಕಾರದವರು ಇದನ್ನು ಒಪ್ಪಿಕೊಳ್ಳುವುದಕ್ಕೆ ಆಗಿಲ್ಲ. ನಾನೂ ಇದನ್ನು ಒತ್ತಾಯ ಮಾಡುತ್ತೇನೆ. ಇಷ್ಟು ಹೇಳಿದಮೇಲೆ. ಮಾನ್ಯ ಸದಸ್ಯರು ತಮ್ಮ ಖೋತಾ ಸೂಚನೆಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri K. PATTABHIRAMAN.—Both the Hon'ble Members Sri P. R. Ramaiya and Mr. B. Hutche Gowda have asked you for a definite assurance whether you would consid r the question of investing the local bodies and village panchayats to take the first step in the decentralisation of judicial administration in the sense of investing certain powers under special Acts which are easy to those bodies to administer. For instance, under the Cattle Trespass Act and some revenue Acts. Please explain whether any steps would be taken in that direction.

ಶ್ರೀ ಎ. ಜಿ. ರಾಮಚಂದ್ರರಾವ್.—ಇದರಲ್ಲಿ ಸರ್ಕಾರದವರ ಅಭಿಪ್ರಾಯವಾದರೂ ಇಷ್ಟೆ. ನ್ಯಾಯಾಂಗದ ಶಾಖೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ Decentralise ಮಾಡಬೇಕೆಂದು ಹೇಳಿ ಹಿಂದೆಯೇ ಒಂದುಕಡೆ ಸ್ಥಳೀಯ ಮುನಿಸಿಫ್ ಕೋರ್ಟುಗಳಿಗೂ ಇನ್ನೊಂದು ಕಡೆ ಬೆಂಚು ಕೋರ್ಟುಗಳಿಗೂ ಕೊಟ್ಟಿವು. ಇದರ ಅನುಭವ ಅಷ್ಟಾಗಿ ತೃಪ್ತಿಕರವಾಗಿರಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಆದರೂ ಇದನ್ನು ಬಿಡಕೂಡದೆಂದು ಹೇಳಿ ಹೆಚ್ಚಿಗೆ ಒತ್ತಾಯಬಂದರೆ ಪರ್ಯಾಲೋಚನೆ ಮಾಡುತ್ತೇವೆ.

Mr. SPEAKER.— The question is :

"That a sum not exceeding Rs. 28,07,800 be granted to the Government to defray the charges which will come in course of payment during the year ending 31st day of March 1956 in respect of 'Administration of Justice.'"

The motion was adopted.

DEMAND No. 15—JAILS AND CONVICT SETTLEMENTS.

28. JAILS AND CONVICT SETTLEMENTS.

Mr. SPEAKER.—Motion moved :—

"That a sum not exceeding Rs. 15,09,000 be granted to the Government to defray the charges which will come in course of payment during the year ending 31st day of March 1956, in respect of 'Jails and Convict Settlements.'"

In this Demand, cut motions Nos. 42, 46, 49, 51, 53 and 54 will be taken up. Cut motion 42 by Sri H. Linga Reddy. He is not present. Next cut motion No. 46 by Sri S. R. Nagappa Setty.

The Hon'ble Members will kindly be very brief because there is no time at our disposal.

Transfer of Jails to rural parts.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, 'ಖೈದಿಗಳಿಗೆ ವ್ಯವಸಾಯದ ವಿಷಯದಲ್ಲಾ ಮತ್ತು ಗೃಹ ಕೈಗಾರಿಕೆಗಳಲ್ಲೂ ಶಿಕ್ಷಣವನ್ನು ಕೊಡುವುದಕ್ಕಾಗಿ ಜೈಲುಗಳನ್ನು ಸಾಗುವಳಿ ಮಾಡತಕ್ಕ ಗ್ರಾಮಾಂತರ ಪ್ರದೇಶಗಳಿಗೆ ವರ್ಗಾಯಿಸುವುದರ ಅವಶ್ಯಕತೆಯನ್ನು ಚರ್ಚಿಸುವುದಕ್ಕಾಗಿ' ನಾನು ಈ ಖೋತಾ ಸೂಚನೆಯನ್ನು ತಂದಿದ್ದೇನೆ. ಈ ಸೂಚನೆಯನ್ನು ಸಭೆಯ ಮುಂದಿಡುತ್ತಾ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸುಮಾರು 800 ಜನರವರೆಗೂ ಖೈದಿಗಳು ಒಂದೇ ಸ್ಥಳದಲ್ಲಿ ಆಡಳಿತಕ್ಕೂ ತೊಂದರೆಯಾಗತಕ್ಕ ರೀತಿಯಲ್ಲಿ ಇದ್ದಾರೆ. ಅವರಿಗೆ ಇಲ್ಲಿ ಒಂದಾಣಿ, ಅರುಕಾನು ಮೂರುಕಾನು ಬರುವ ರೀತಿಯಲ್ಲಿ ಉದ್ಯೋಗವನ್ನು ಕಲ್ಪಿಸಿಕೊಟ್ಟು ಅವರಿಗೊಂದು ವ್ಯವಸ್ಥಾ ಕಾರ್ಯವನ್ನು ಕೈಗೊಂಡಿದ್ದಾರೆಂದು ಗೊತ್ತಾಗಿದೆ. ಇದರಿಂದ ಯಾರಿಗೂ ಉಪಯೋಗವಾಗುವಂತೆ ಕಾಣುವುದಿಲ್ಲ. ಇದಕ್ಕೆ ಬದಲು ಅವರನ್ನು ಒಂದೊಂದು ಜಿಲ್ಲೆಗೂ ವರ್ಗಾಯಿಸಿ ಸುಮಾರು 100-100 ಜನರಿರುವ ಕಾಲೊನಿಮಾಡಿ, ಅವರಿಗೆ ವ್ಯವಸಾಯಕ್ಕೆ ಯೋಗ್ಯವಾದ ಎರಡು ಸಾವಿರವೋ, ಮೂರು ಸಾವಿರವೋ ಎಕರೆ ಪ್ರದೇಶವನ್ನು ಸಾಗುವಳಿ ಮಾಡಲು ಕೊಟ್ಟರೆ, ಆ ಖೈದಿಗಳು ವ್ಯವಸಾಯ ಮಾಡಿ ತಮ್ಮ ಜೀವನವನ್ನೂ ನಡೆಸಿಕೊಳ್ಳಲು ಶಕ್ತರಾಗುತ್ತಾರಲ್ಲದೆ, ಮುಂದೆ ವ್ಯವಸಾಯದಲ್ಲೇ ನಿರತರಾಗಿ ಜೀವನವನ್ನು ನಡೆಸುವ ಹಾಗೆ ಮಾಡುವುದಕ್ಕೂ, ಅವರ ಮನಸ್ಸಿಗೆ ಶಾಂತಿಯನ್ನು ತರುವುದಕ್ಕೂ ಅವಕಾಶವಿರುತ್ತದೆ. ಇಲ್ಲಾದರೋ ಜೈಲಿನಲ್ಲಿ ಖೂನಿ ಮಾಡಿದವರು, ಕಳ್ಳತನ ಮಾಡಿದವರು, ದರೋಡೆ ಮಾಡಿದವರು–ಎಲ್ಲರನ್ನೂ ಒಂದೇಕಡೆ ಸೇರಿಸಿಕೊಂಡು, ಅವರು ಬೇರೆ ಯಾವ ಉಪಯುಕ್ತವಾದ ಕೆಲಸಗಳನ್ನೂ ಮಾಡದೆ ಚಿಂತೆ ಮಾಡುತ್ತಾ ಕುಳಿತಿರುವಂತೆ

ಮಾಡುವುದರ ಬದಲು ವ್ಯವಸಾಯದಲ್ಲಿ ನಿರರಾಗಿತ ಶಾಂತ ಮನಸ್ಸಿನಿಂದ ನೆಮ್ಮದಿಯಿಂದ ಇರುವುದನ್ನು ಕಲಿಸಬಹುದು. ವ್ಯವಸಾಯಕ್ಕೆ ಅನುಕೂಲವಾದ ಸ್ಥಳಗಳಿಲ್ಲದ ಪ್ರದೇಶದಲ್ಲಿ ಗೃಹ ಕೈಗಾರಿಕೆಗಳನ್ನು ಕಲಿಸಬಹುದು. ಅಂತೂ ಈ ರೀತಿಯ ಒಂದು ಏರ್ಪಾಡನ್ನು ಮಾಡಿ, ಆ ಖೈದಿಗಳ ಮನೆಯವರನ್ನೂ ಹೆಂಡತಿ ಮಕ್ಕಳನ್ನೂ ಕರೆಸಿಕೊಂಡು 5-10 ಎಕರೆಗಳನ್ನು ಕೊಟ್ಟು ವ್ಯವಸಾಯ ಮಾಡಿ ಉತ್ತಮ ಪ್ರಜೆಯಾಗುವುದಕ್ಕೆ ಅನಕೂಲತೆ ಮಾಡುವುದರಿಂದ ಮುಂದೆ ಖಂಡಿತವಾಗಿಯೂ ಕಳ್ಳತನ ಮಾಡುವುದಕ್ಕೆ ಹೋಗುವುದಿಲ್ಲ. ತನ್ನ ಸಂಸಾರದೊಂದಿಗೆ ಅಲ್ಲಿಯೇ ನೆಲಸಬಹುದು. ಇದರಿಂದಾಗಿ ಸರ್ಕಾರದವರೂ ಒಂದು ಹೊಸ ವ್ಯವಸಾಯ ಕ್ರಮವನ್ನೂ ರೂಢಿಗೆ ತರುವುದಕ್ಕೆ ಅನುಕೂಲವಾಗುತ್ತದೆ. ಈಗಲೂ ನಾವು ಜೈಲುಗಳನ್ನು ಇಟ್ಟಿರುವುದರ ಉದ್ದೇಶವಾದರೂ ಖೈದಿಯನ್ನು ಒಬ್ಬ ಸತ್ಪ್ರಜೆಯಾಗಿ ಮಾಡಬೇಕೆಂಬುದೇ ಹೊರತು, ಅವನು ಯಾವುದೋ ತಪ್ಪು ಮಾಡಿದುದಕ್ಕಾಗಿ ಯಾವಾಗಲೂ 20 ವರ್ಷವೋ 30 ವರ್ಷವೋ ವ್ಯಸನದಲ್ಲಯೇ ಉಳಿಯಬೇಕೆಂದಲ್ಲ. ಅವನ ಹೃದಯವನ್ನು ಒಂದು ಸಾರಿ ಪರಿವರ್ತನೆ ಮಾಡಿದರೆ ಅವನು ಎಂದೆಂದಿಗೂ ಸತ್ಪ್ರಜೆಯಾಗುತ್ತಾನೆ. ಇದಕ್ಕೆ ನೂಕ್ತ ಕಾರ್ಯ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿ ನಾನು ಈ ಖೋತಾ ಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

*ಶ್ರೀ ಮುಲ್ಕ ಗೋಪಿಂದರೆಡ್ಡಿ.—ಈಗಿರತಕ್ಕ ಸೆಂಟ್ರಲ್ ಜೈಲು ಕಾಂಪೌಂಡುಗಳ ಮಧ್ಯೆ ಇದೆ. ಅದನ್ನು ಯೂನಿವರ್ಸಿಟಿಗೆ ಕೊಟ್ಟರೆ ಒಂದು Residential Universityಯನ್ನು ಏರ್ಪಾಡು ಮಾಡಬಹುದೆಂದು ಹೇಳಿ ನಾವೂ ಅನೇಕಸಾರಿ ಸರ್ಕಾರದವರನ್ನು ಒತ್ತಾಯಮಾಡಿದ್ದೇವೆ. ಹಿಂದೆ ಕೂಡ ಈ ಪ್ರಶ್ನೆ ಸಭೆಯಮುಂದೆ ಬಂದಾಗ ಜೈಲು ಮಂತ್ರಿಗಳು serious ಆಗಿ consider ಮಾಡುತ್ತೇವೆಂದು ಹೇಳಿದ್ದರು. ಈಗಲಾದರೂ ಅದಷ್ಟು ಜಾಗ್ರತೆ ಮಾಡಿಕೊಡುತ್ತಾರೆಂದು ನಂಬಿ ನಾನು ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತೇನೆ.

Amenities to Prisoners.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಅಧ್ಯಕ್ಷರೇ, ಆಹಾರ ಮತ್ತು ರೇಷ್ಟ ಪದಾರ್ಥಗಳು, ಬೀಡಿಗಳನ್ನೊದಗಿಸುವುದು ಮತ್ತು ಅವರು ಮಾಡಿದ ಕೆಲಸಗಳಿಗೆ ಕೂಲಿಗಳನ್ನು ಪಾವತಿಮಾಡುವುದು ಮೊದಲಾದ ವಿಷಯಗಳಲ್ಲಿ ಹೆಚ್ಚಿನ ಅನುಕೂಲಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಚರ್ಚಿಸುವುದಕ್ಕಾಗಿ ನಾನು ಈ ಖೋತಾ ನಿರ್ಣಯವನ್ನು ಕಳುಹಿಸಿದ್ದೇನೆ.

ಮೈಸೂರು ಸಂಸ್ಥಾನದಲ್ಲಿ ಮೂರು ಮೇಜರ್ ಜೈಲುಗಳು, ಒಂದು ಜೈಲು, ಒಂದು ಬಾರ್ಸ್ಟರ್ ಸ್ಕೂಲು ಒಂದು ಜೂನಿಯರ್ ಸರ್ಟಿಫೈಡ್ ಸ್ಕೂಲು, ಎರಡು ಸ್ಪೆಷಲ್ ಲಾಕಪ್‌ಗಳು, ಏಳು ಜಿಲ್ಲಾ ಲಾಕಪ್‌ಗಳು, ಇಪ್ಪತ್ತು ತಾಲ್ಲೂಕು ಲಾಕಪ್‌ಗಳು ಮತ್ತು ಸಬ್ ಜೈಲುಗಳು ಇವೆಯೆಂದೂ ತಿಳಿದಿದೆ. ಮೈಸೂರಿಗೆ ಬಳ್ಳಾರಿ ಸೇರಿದಮೇಲೆ ಸುಮಾರು ಮೂರು ಸಾವಿರ ಜನರಷ್ಟು ಇಲ್ಲಿ ಯಾವಾಗಲೂ ಇರುತ್ತಾರೆಂದು ಹೇಳಬಹುದು. ನಮ್ಮ ದೇಶದಲ್ಲಿ ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳಿಂದ ಹಿಡಿದು ಮಂತ್ರಿಗಳೂ ಸಾಮಾನ್ಯವಾಗಿ ಜೈಲಿನ ಅನುಭವವುಳ್ಳವರಾಗಿದ್ದರೂ ಕೂಡ, ಅವರು ಅಧಿಕಾರಕ್ಕೆ ಬಂದು ಸುಮಾರು ಎಂಟು ವರ್ಷಗಳಾದರೂ, ಇನ್ನೂ ಜೈಲುಗಳ ಪರಿಸ್ಥಿತಿ ಸ್ವಲ್ಪವೂ ಸುಧಾರಿಸಿಲ್ಲ. ಕೆಲವು ವಿಷಯಗಳಲ್ಲಿ ಹಿಂದೆ ಇದ್ದುದಕ್ಕಿಂತಲೂ ಹೀನಸ್ಥಿತಿಗೆ ಬಂದಿದೆಯೆಂದರೆ ತಪ್ಪಾಗಲಾರದು. ನನಗೆ ಹಿಂದೆಂದೂ ಇಲ್ಲಿ ಬೆಂಗಳೂರಿನ ಜೈಲನ್ನು ನೋಡುವ ಅವಕಾಶ ದೊರೆತಿರಲಿಲ್ಲ. ನಾನು ಜೈಲನಲ್ಲಿರ ಬೇಕಾದ ಎರಡು ಸಂದರ್ಭಗಳಲ್ಲೂ ಶಿವಮೊಗ್ಗ ಜೈಲ ನಲ್ಲೇ ಇದ್ದೆ. ಈಚೆಗೆ, ಮೈಸೂರು ವಿದ್ಯುಚ್ಛಕ್ತಿ ಇಲಾಖೆಯ ನೌಕರರು ನಡೆಸಿದ ಮುಷ್ಕರದ ಸಂದರ್ಭದಲ್ಲಿ ನನಗೂ ಒಮ್ಮೆ ಬೆಂಗಳೂರು ಜೈಲಿಗೆ ಹೋಗುವ ಅವಕಾಶ ದೊರೆಯಿತು. ಇದರಿಂದಾಗಿ ಬೆಂಗಳೂರು ಜೈಲು ಹೇಗೆ ನಡೆಯುತ್ತಿದೆ ಯೆಂಬುದನ್ನು ಅರಿತು ಕೊಳ್ಳಲು ನನಗೆ ಸಹಾಯವಾಯಿತು.

4-30 P.M.

ಈ ಸಂದರ್ಭದಲ್ಲಿ ನಾವು ಈ ಖೈದಿಗಳನ್ನು ಹೇಗೆ ನೋಡಬೇಕು, ನಮ್ಮ ದೃಷ್ಟಿ ಎತ್ತಕಡೆಗಿರಬೇಕು, ಎನ್ನುವುದಕ್ಕಿಂತ ಬಹಳ ಮುಖ್ಯವಾದದ್ದು. ಮಹಾತ್ಮಗಾಂಧಿಯವರೇ ಈ ಖೈದಿಗಳನ್ನೂ ಮತ್ತು ಹೇಗೆ ತಪ್ಪುಮಾಡಿದಂಥ ಜನರನ್ನೂ ಹೇಗೆ ನೋಡಿಕೊಳ್ಳಬೇಕು, ಹೇಗೆ ಅವರ ವಿಚಾರದಲ್ಲಿ ನಾವು ವರ್ತಿಸಬೇಕು ಎನ್ನುವುದರ ಬಗ್ಗೆ ಏನು ಹೇಳಿದ್ದಾರೆ ಅಂದರೆ: ರೋಗಿಗಳನ್ನು ನಾವು ಯಾವರೀತಿಯಲ್ಲಿ ನೋಡಿಕೊಳ್ಳುತ್ತೇವೋ ಆ ರೀತಿಯಲ್ಲಿ ಈ ಖೈದಿಗಳನ್ನೂ ತಪ್ಪಿತಸ್ಥರನ್ನೂ ನೋಡಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಈ ದಿವಸ ಇರತಕ್ಕ ಜೈಲುಗಳನ್ನು ನಾವು ಹೋಗಿ ನೋಡಿದರೆ ಹಿಂದೆ ನಾವು ಯಾವುದನ್ನು ಚರಿತ್ರೆಗಳನ್ನು ಓದಿ ತಿಳಿದುಕೊಳ್ಳುತ್ತಿದ್ದೆವೋ ಅದನ್ನು ಈ ದಿವಸ ನೋಡುತ್ತಿದ್ದೇವೋ ಏನೋ ಅನ್ನುವ ರೀತಿಯಲ್ಲಿ ಕಂಡುಬರುತ್ತಿವೆ. ಹಿಂದೆ ಜೈಲುಗಳಲ್ಲಿ ನಾನಾ ರೀತಿಯ ಜೈಲುಗಳಿದ್ದವು. ಯುದ್ದದಲ್ಲಿ ಬೇರೆಬೇರೆ ದೇಶದ ಸೈನಿಕರು ಸೋತು ಕೈಸೆರೆಸಿಕ್ಕಿದಂಥವರನ್ನೆಲ್ಲಾ ಹೇಗೆ ಒಂದು ಕಡೆ ಕೂಡಿ ಹಾಕುತ್ತಿದ್ದರೋ ಆ ರೀತಿ ಇದೆ. ತಾವು ಈ ದಿವಸ ಎಲ್ಲಾ ತರಹೆಯ ತಕ್ಸೀರು ಮಾಡತಕ್ಕವರನ್ನೂ ಒಂದೇ ಕಡೆ ಹಾಕಿರುತ್ತೀರಿ. ಈ ನಾನಾ ಕಾರಣಗಳಿಂದ ಈ ಜೈಲುಗಳ ಸುಧಾರಣೆ ಅಗತ್ಯವೆಂದೂ ಮತ್ತು ಇವುಗಳನ್ನು ಯಾವರೀತಿಯಲ್ಲು ಸುಧಾರಣೆ ಮಾಡಬೇಕು ಅನ್ನತಕ್ಕ ವಿಚಾರದಲ್ಲಿ ಅನೇಕ ಮಹನೀಯರು ಅನೇಕ ರೀತಿಯ ಸಲಹೆಗಳನ್ನೂ ಮತ್ತು ಅಭಿಪ್ರಾಯಗಳನ್ನೂ ಈಗಾಗಲೇ ಕೊಟ್ಟಿದ್ದಾರೆ. ಅನೇಕ ಕಡೆಗಳಲ್ಲಿ ಈ ಸಂಬಂಧವಾಗಿ ಒಂದು ಹೆಚ್ಚಿನ ಪರಿಶೋಧನೆಗಳು ಕೂಡ ನಡೆಯುತ್ತಿವೆ. ನಮ್ಮಲ್ಲೂ ಕೂಡ ಈ ಸಂಬಂಧವಾಗಿ ಶ್ರೀ ತಿಪ್ಪೇಸ್ವಾಮಿ ಎಂಬವರು—ಇವರು ಇಂಗ್ಲೆಡಿಗೆ ಹೋಗಿ ಈ ವಿಷಯಗಳಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡು ಬಂದಿರತಕ್ಕವರು—ಆಗಾಗ್ಗೆ ಜೈಲಿಗೆ ಈ ಸಂಬಂಧದಲ್ಲಿ ಬರುತ್ತಿದರು. ಈ ವಿಷಯದಲ್ಲಿ ಒಬ್ಬ ಮನುಷ್ಯನು ಹೇಗೆ ತಪ್ಪಿತಸ್ಥನಾಗುತ್ತಾನೆ, ಜೈಲಿಗೆ ಬಂದನಂತರ ಆತನ ಭಾವನೆ ಏನು ಅನ್ನತಕ್ಕಂಥ ಅಂಶಗಳನ್ನೆಲ್ಲಾ ಈಗ ಜೈಲನಲ್ಲಿ ಅನೇಕ ರೀತಿಯ ಶಿಕ್ಷೆ ಅನುಭವಿಸುತ್ತಿರುವವರನ್ನು ಕೂಲಂಕಷವಾಗಿ ವಿಚಾರಮಾಡಿ ತಿಳಿದುಕೊಳ್ಳುತ್ತಿದ್ದಾರೆ. ನಮ್ಮ ಸಂಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ನಾವು ಖರ್ಚುಮಾಡುವ ಹದಿನೈದು ಲಕ್ಷ ರೂಪಾಯಿಗಳು ಯಾವರೀತಿ ಖರ್ಚಾಗುತ್ತಿವೆ, ಇದರಿಂದ ನಾವೇನಾದರೂ ಉಪಯೋಗವನ್ನು ಪಡೆಯುತ್ತಿದ್ದೇವೆಯೇ ಎಂಬುದನ್ನು ನೋಡಬೇಕು. ಈಗ ಇರ

(ಶ್ರೀ ಎಸ್. ಗೋಪಾಲಗೌಡ.)

ತಕ್ಕ ಖೈದಿಗಳಿಗೆ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿರುವಾಗ, ನಾವು ಅವರನ್ನು ಯಾವರೀತಿಯಾಗಿ ನಾಗರಿಕರನ್ನಾಗಿ ಮಾಡುವುದಕ್ಕೆ ಪ್ರಯತ್ನ ಪಡಬೇಕು ಅನ್ನುವುದರ ಬಗ್ಗೆ ನಾನು ಕೆಲವು ವಿಷಯಗಳನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಇತ್ತೀಚಿಗೆ ಮಿನಿಮಂ ಸೆಕ್ಯೂರಿಟಿ ಜೈಲುಗಳಂತೆ ಬೇರೆ ತೆರೆಯಬೇಕೆಂದಿದ್ದೇವೆಂದಿದ್ದಾರೆ. ಈಗ ಬೆಂಗಳೂರಿನಲ್ಲಿರತಕ್ಕಂಥ ಖೈದಿಗಳನ್ನೆಲ್ಲಾ ಬಳ್ಳಾರಿ ಜೈಲಿಗೆ ವರ್ಗ ಮಾಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದೆ ಎಂಬುದಾಗಿ ನಾನು ಕೇಳುತ್ತಿದ್ದೇನೆ. ಆದರೆ ಈಗ ಈ ಮಿನಿಮಂ ಸೆಕ್ಯೂರಿಟಿ ಜೈಲುಗಳನ್ನು ಸರ್ಕಾರದವರು ಈಗತಾನೆ ಪ್ರಾರಂಭ ಮಾಡಿರುವುದರಿಂದ, ಅವುಗಳಿಗೆ ಹೇಗೆ ರಕ್ಷಣೆ ಕೊಡಬೇಕು ಎನ್ನುವ ವಿಚಾರವಾಗಿ ಸಾಕಷ್ಟು ಪ್ರಕಟಿಸಿರುವುದಿಲ್ಲವಾದದ್ದರಿಂದ ನಾನು ಈಗಲೇ ನನ್ನ ಅಭಿಪ್ರಾಯವನ್ನು ಕೊಡುವುದಕ್ಕೆ ಇಷ್ಟಪಡುವುದಿಲ್ಲ. ನಮ್ಮ ದೇಶದಲ್ಲಿ ಒಂದು ಜೈಲು ಮ್ಯಾನುಯಲ್ ಎಂದಿದೆ. ಇದೊಂದು ದೊಡ್ಡ ಹಳೆ ಕಡತವಾಗಿ ಹೋಗಿದೆ. ಆದರೆ ಇಂಥ ತಿದ್ದುಪಡಿಗಳೂ ಇರತಕ್ಕಂಥ ಕಡತ ಸಿಕ್ಕುವುದು ಬಹಳ ಕಷ್ಟ. ಇದನ್ನು ಇಲ್ಲಿಗೆ ಏಳು-ಎಂಟು ವರ್ಷಗಳ ಹಿಂದೆಯೇ ತಿದ್ದುಪಡಿ ಮಾಡಬಹುದಾಗಿತ್ತು. ಆದರೆ ಇನ್ನೂ ಮಾಡಿಲ್ಲ. ಇದನ್ನೆಲ್ಲಾ ನೋಡಿದರೆ ಮುಖ್ಯವಾಗಿ ನಮಗೆ ಏನು ಕಾಣಿಸುತ್ತಿದೆ ಎಂದರೆ ಈ ರಾಜಮಹಾರಾಜರುಗಳಿಗೆ ಪಟ್ಟಾಭಿಷೇಕ ಇತ್ಯಾದಿಗಳಾದಾಗ ಈ ಖೈದಿಗಳಿಗೆಲ್ಲಾ ಒಂದು ರಿಯಾಯಿತಿ ದೊರೆಯುತ್ತಿತ್ತು. ಆದರೆ ಈಗ ಬೇರೆ ರೀತಿಯಲ್ಲಿ ದೊರೆಯುತ್ತಿದೆ. ಈ ಹಿಂದೆ ಆ ಅಂಧ್ರಪ್ರಾಂತ್ಯ ಹೊಸದಾಗಿ ಪ್ರಾರಂಭವಾದಾಗ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದಂಥ ಬಹಳ ಜನರನ್ನು ಜೈಲಿನಿಂದ ಬಿಡುಗಡೆಮಾಡಲಾಯಿತು. ಆದರೆ ನಮ್ಮ ಮೈಸೂರಿನಲ್ಲಿ ಆ ರೀತಿಯಾಗಿ ಯಾರನ್ನೂ ಬಿಡುಗಡೆ ಮಾಡಿರುವುದಿಲ್ಲ. ಆದುದರಿಂದ ಇವರನ್ನು ಹೀಗೆ ಮುಕ್ತರನ್ನಾಗಿ ಮಾಡುವ ವಿಚಾರದಲ್ಲಿ ಕಾನೂನು ಪ್ರಕಾರ ಇದನ್ನು ಯಾವರೀತಿ ಅಳವಡಿಸಿಕೊಂಡು ಹೋಗಬೇಕೆಂಬುದೂ ಒಂದು ವಿಷಯ. ಇವರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡತಕ್ಕದ್ದು ಒಂದು ವಿಷಯ. ಈಗ ಖೈದಿಗಳಿಗೆ ಕೊಡುತ್ತಿರುವ ರೇಷನ್ ಕ್ರಮದಲ್ಲಿ ಸಶ್ರಮಶಿಕ್ಷೆಗೊಳಗಾದವರಿಗೆ ಇಪ್ಪತ್ತು ನಾಲ್ಕು ಔನ್ಸ್ ಭತ್ಯವನ್ನೂ ಮತ್ತು ಇತರ ಖೈದಿಗಳಿಗೆ ಇಪ್ಪತ್ತು ಔನ್ಸುಗಳ ಆಹಾರ ಪಡಿತರವನ್ನೂ ಕೊಡಬೇಕಾದದ್ದು ಯುಕ್ತ. ಆದರೆ ಈಗ ಹಾಲು ಕೊಡುತ್ತಿರುವುದು ಹದಿನಾರು ಔನ್ಸು ಮತ್ತು ಹನ್ನೆರಡು ಔನ್ಸುಗಳು. ಈ ಹದಿನಾರು ಔನ್ಸುಗಳಲ್ಲಿ ಏನೇನು ಸೇರಿರುತ್ತವೆ ಎಂದರೆ ಅಕ್ಕಿ ನಾಲ್ಕು ಔನ್ಸ್, ರಾಗಿ ಹನ್ನೆರಡು ಔನ್ಸುಗಳು ಒಂದುಬಗೆಯ ಖೈದಿಗಳಿಗೆ. ಮತ್ತೊಂದು ಬಗೆಯ ಖೈದಿಗಳಿಗೆ ಕೊಡತಕ್ಕ ಹನ್ನೆರಡು ಔನ್ಸುಗಳಲ್ಲಿ ಎರಡು ಔನ್ಸ್ ಅಕ್ಕಿ ಉಳಿದಿದ್ದೆಲ್ಲ ರಾಗಿ. ಆದರೆ ಇತ್ತೀಚೆಗೇನೋ ಎರಡು ಔನ್ಸ್ ಗಂಜಿ ಬೇರೆ ಕೊಡುತ್ತಿದ್ದಾರೆ. ಆದರೆ ಹೀಗೆ ಇವರಿಗೆ ಕೊಡತಕ್ಕಂಥ ಆಹಾರ ಪದಾರ್ಥಗಳ ಪೈಕಿ ಒಂದರಲ್ಲೂ ನ್ಯೂಟ್ರಿಷ್ ಇರುವುದಿಲ್ಲ ಹೀಗಾಗಿ ಅವರು ಈ ದಿವಸ ಅನೇಕ ತೊಂದರೆಗಳಿಗೀಡಾಗುತ್ತಿದ್ದಾರೆ, ಅನೇಕವೇಳೆ ಅವರು ರೋಗಗಳಿಗೂ ತುತ್ತಾಗಬೇಕಾಗುತ್ತದೆ. ಈ ದಿವಸ ಜೈಲಿನಲ್ಲಿ ಇರತಕ್ಕ ಕೊರತೆಗಳಲ್ಲಿ ಇದೇ ಬಹಳ ದೊಡ್ಡದು. ಆದರೆ ನಾವು ಈ ದಿವಸ ಈ ಜೈಲುಗಳಿಗೆ ಒದಗಿಸುತ್ತಿರುವ ಪಡಿತರದ ಪ್ರಮಾಣಗಳೆಲ್ಲವೂ ಕೇವಲ ಇತ್ತೀಚೆಗೆ ಆಹಾರದ ಹತೋಟಿಗಳು ಬಂದಮೇಲೆ ಮಾಡಿರುವುದಾಗಿವೆ. ಈ ಹಿಂದೆ ಅವರಿಗೆ ಏನು ಆಹಾರದ ಅಂತವನ್ನು (quantity) ಕೊಡಲಾಗುತ್ತಿತ್ತೋ ಅದಕ್ಕಿಂತ ಈಗ ಕಡಮೆ ಕೊಡಲಾಗುತ್ತಿದೆ. ಹೀಗೆ ಕೊಡತಕ್ಕ ಅಂತವನ್ನು ಕಡಮೆಮಾಡಿರುವುದರ ಜೊತೆಗೆ ಈ ಅಂತ ಇನ್ನೂ ಅನೇಕ ರೀತಿಗಳಲ್ಲಿ ಕಡಮೆಯಾಗುತ್ತಾ ಹೋಗುತ್ತಿದೆ. ತೂಕ ಸರಿಯಾಗಿರುವುದಿಲ್ಲ. ಇದರ ಮೇಲೆ ಕಂಟ್ರಾಕ್ಟರ್ ಒದಗಿಸುವ ಸಾಮಾನುಗಳಲ್ಲಿ ಅನೇಕ ಕಶ್ಮಲಗಳು ಬೇರೆ ಸೇರಿಕೊಂಡಿರುತ್ತವೆ. ಈ ನಾನಾ ಕಾರಣಗಳಿಂದ ಈ ರೇಷನ್ನನ್ನು ಅವರಿಗೆ ಹೆಚ್ಚಿಸಬೇಕಾದದ್ದು ಅಗತ್ಯ. ಈಗ ರೇಷನ್ನಿಗೆ ಯಾವ ಅಡ್ಡಿಯೂ ಇರುವುದಿಲ್ಲ. ಇದನ್ನು ಹೆಚ್ಚಿಸಬಹುದು. ಇನ್ನು ಇವರಿಗೆ ಸ್ವಲ್ಪ ಎಣ್ಣೆ ಬೇರೆ ಕೊಡುತ್ತಿದ್ದಾರೆ. ಆದರೆ ಅವರಿಗೆ ಸಾಕಷ್ಟು ಆಹಾರವಿಲ್ಲದೆ ಇರುವಾಗ ಅವರಿಗೆ ಈ ಎಣ್ಣೆ ನೀರಿನ ಸ್ನಾನದಿಂದ ಅವರನ್ನು ಸುಖಪಡಿಸುವುದು ಸರಿಯಾದದ್ದು ಎಂದು ನನಗೇನೋ ಕಂಡುಬರಲಿಲ್ಲ. ಅವರಿಗೆ ಮುಖ್ಯವಾಗಿ ಈ ಆಹಾರದ ವಿಷಯದಲ್ಲಿ ಒಂದು ಅನುಕೂಲ ಮಾಡಿಕೊಟ್ಟರೆ ಸಾಕಾಗಿದೆ. ಅಲ್ಲಿ ಈ ಅಡಿಗೆಗೆ ಉಪಯೋಗಿಸುತ್ತಿರುವ ಪಾತ್ರೆಗಳು ಯಾವರೀತಿಯಾಗಿರುತ್ತವೆ ಎನ್ನುವುದು ತಮಗೆಲ್ಲಾ ಗೊತ್ತಿರುವುದೇ ಆಗಿದೆ. ಅಲ್ಲಿ ಕಬ್ಬಿಣದ ಕಡಾಯಿಗಳನ್ನಿಟ್ಟು ಈ ಆಹಾರವನ್ನು ಬೇಯಿಸಿ ಹಾಕುತ್ತಿದ್ದಾರೆ. ಆ ಪಾತ್ರೆಗಳೆಲ್ಲಾ ತುಕ್ಕುಹಿಡಿದು ಹೋಗಿರುತ್ತವೆ— ಅಂಥ ಪಾತ್ರೆಗಳಲ್ಲಿ ಬೇಯಿಸಿದ ಆ ಮುದ್ದೆ—ಅನ್ನ ಇವುಗಳನ್ನು ತಿನ್ನುವುದಕ್ಕೆ ಮನುಷ್ಯನಿಗೆ ಬಹುಕಷ್ಟ.

ಒಬ್ಬ ಮಾನ್ಯ ಸದಸ್ಯರು.—ನಾವೂ ಸಹ ಅನೇಕ ಸಲ ಜೈಲಿಗೆ ಹೋಗಿದ್ದೇವೆ. ಆ ವಿಚಾರಗಳೆಲ್ಲಾ ನಮಗೂ ಗೊತ್ತಿವೆ.

ಶ್ರೀ ಎಸ್. ಗೋಪಾಲಗೌಡ.—ಹೌದು. ಆದರೆ ನೀವೆಲ್ಲರೂ ಜೈಲಿನಲ್ಲದ್ದರೂ ರಾಜೋಪಚಾರಗಳನ್ನು ಪಡೆದು ಬಂದಿದ್ದೀರಿ. ಆದರೆ ಈ ಕಾಂಗ್ರೆಸ್ ಸರ್ಕಾರ ಬಂದಮೇಲೆ ನಾನು ಸಹ ಎರಡಾವರ್ತಿ ಜೈಲಿಗೆ ಹೋಗಿಬಂದಿದ್ದೇನೆ. ಆದರೆ ಈ ದಿವಸ ಸಾಮಾನ್ಯ ಖೈದಿಗಳಿಗೂ ರಾಜಕೀಯ ಖೈದಿಗಳಿಗೂ ಯಾವ ವ್ಯತ್ಯಾಸವೂ ಇದ್ದಹಾಗೆ ಕಂಡುಬರಲಿಲ್ಲ. ನಾನು ಮೊದಲು ಕಾಗೋಡು ವ್ಯವಹಾರದಲ್ಲಿ ಒಂದು ಸಲ ಜೈಲಿಗೆ ಹೋಗಬೇಕಾಗಿ ಬಂದಿತ್ತು. ಆಗ ಸಹಿತ ನಾವು ಅಲ್ಲಿ ಈ ಅನ್ನಆಹಾರಗಳಿಗಾಗಿ ಉಪವಾಸ ವ್ರತ ಮಾಡಬೇಕಾದ ಪ್ರಸಂಗ ಬಂತು. ಈಗಲೂ ಸಹ ಆ ಕ್ಲಾಸಿಫಿಕೇಷ್ ಮಾಡಿರುವುದಿಲ್ಲ. ಈಗ ಮೊನ್ನೆ ನಾನು ಬೆಂಗಳೂರು ಜೈಲಿನಲ್ಲಿರುವಾಗ ಸಹ 'ಇದನ್ನು ನೀವು ಪರಿಗಣಿಸದೆ ಹೋದರೆ ನಾನು ಮತ್ತೆ ಉಪವಾಸ ಹೂಡಬೇಕಾಗುತ್ತದೆ' ಎಂದು ಸರ್ಕಾರಕ್ಕೆ ಕಾಗದ ಪತ್ರಗಳನ್ನು ಬರೆದು ಅಜಿಟೇಟ್ ಮಾಡಬೇಕಾಗಿ ಬಂತು. ನಾನು ಈ ರಾಜಕೀಯ ಖೈದಿಗಳ ವಿಚಾರ ಹೇಳುವಾಗ ತಾವು ಒಂದು ಅಂಶ ಗಮನದಲ್ಲಿಟ್ಟುಕೊಳ್ಳಬೇಕು. ಈ ದಿವಸ ನಾನು ತಮ್ಮ ಖೈದಿ ಆಗಬಹುದು; ನಾಳೆ ನೀವೂ ಕೂಡ ನಮ್ಮ ಖೈದಿಗಳಾಗಬಹುದು. ಆದುದರಿಂದ ಇದು ಏನೇ ಇರಲಿ ಈ ಜೈಲು ಸುಧಾರಣೆಗಳನ್ನು ಮಾಡತಕ್ಕದ್ದು ಅವಶ್ಯಕ. ನಮ್ಮದು ಮಾದರಿ ರಾಜ್ಯ. ನಮ್ಮ ಮೈಸೂರು ಜೈಲುಗಳ ಸುಧಾರಣೆಯನ್ನು ಮಾಡಲು ಈ ಹಿಂದೆ ಒಂದು ಸಮಿತಿಯನ್ನು ಮಾಡಿದ್ದರು. ಆದರೆ ಇತ್ತೀಚೆಗೆ ಮಂತ್ರಿಗಳು ಯಾರು ಬೆಂಗಳೂರು ಜೈಲಿಗೆ ಹೋದಹಾಗೆ ಕಂಡುಬರುತ್ತಿಲ್ಲ. ಅಲ್ಲಿ ಒಬ್ಬ ಖೈದಿಯದ್ದಾನೆ; ಅವನು ಸರಿಯಾಗಿ ವರ್ತಿಸುವುದಿಲ್ಲ—

ಎಂದು ಅದರ ಬಗ್ಗೆ ಒಂದು ಕಥೆಯೇ ಇದೆ. ಆದರೆ ಆ ಮಾಧೂಗೋಸ್ಕರವಾಗಿಯೇ ಯಾರೂ ಹೋಗುತ್ತಿಲ್ಲ ವೆಂದು ಕಾಣುತ್ತದೆ. I wanted to avoid. . . .

Sri A. G. RAMACHANDRA RAO (Minister for Law and Education).—No question of avoiding. If there is anything you had better come out. Otherwise, don't make an insinuation.

ಶ್ರೀ ಎಸ್. ಗೋಪಾಲಗೌಡ.—ಈಗ ನಾನು ನನ್ನ ಅಭಿಪ್ರಾಯವನ್ನು ತಿಳಿಸುತಿದ್ದೇನೆ. ಹೆಚ್ಚಿಗೆ ಯಾರೂ ಈಗ ಈ ಬೆಂಗಳೂರು ಜೈಲಿಗೆ ಹೋಗುತ್ತಿಲ್ಲ. ಅಲ್ಲಿ ಈಗ ಹೆಚ್ಚಿಗೆ ಸ್ಟೋರ್ಟ್ಸ್‌ಗಳು ನಡೆಯುತ್ತಿಲ್ಲ. ಈ ಹಿಂದೆ ಈ ಜೈಲುಗಳಲ್ಲಿರತಕ್ಕ ಖೈದಿಗಳಿಗೆ ಬೀಡಿಗಳನ್ನು ಕೊಡುತ್ತಿದ್ದರು. ಸಾಮಾನ್ಯವಾಗಿ ಈ ಬಂದೀಖಾನೆಯಲ್ಲಿರತಕ್ಕವರೂ, ಸ್ಪೆಷಲ್ ದಲ್ಲಿರತಕ್ಕವರೂ ಈ ಬೀಡಿ ಚಟಕ್ಕೆ ಬಲಬೀಳುವುದು ಜಾಸ್ತಿ. ಈ ಹಿಂದೆ ಆ ಬಳ್ಳಾರಿ ಯನ್ನು ಬಿಟ್ಟುಕೊಂಡು ಮೈನೂರು ಸಂಸ್ಥಾನಕ್ಕೆ ಈ ಖೈದಿಗಳಿಗೆ ಬೀಡಿಗೋಸ್ಕರವಾಗಿ ಐದಾರು ಸಾವಿರ ರೂಪಾಯಿಗಳು ಖರ್ಚಾಗುತ್ತಿದ್ದವು. ಆದಾಗ್ಯೂ ಹಿಂದೆ ಶ್ರೀ ರೆಡ್ಡಿಯವರ ಶಿಫಾರಸಿನಂತೆ 20 ಸಾವಿರಕ್ಕೂ ಮೇಲ್ಪಟ್ಟು ಖರ್ಚಾಗುತ್ತಿದೆ ಎಂದು ಹೇಳಿ ಇದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಆಗಿನಿಂದ ನಿಲ್ಲಿಸಿಬಿಟ್ಟಿದ್ದಾರೆ. ಹೀಗೆ ಈ ದಿವಸ ಆ ಜೈಲಿನಲ್ಲಿರತಕ್ಕ ಖೈದಿಗಳು ಈ ಒಂದು ಚಟಕ್ಕಾಗಿ ಒಂದು ಬೀಡಿಗಾಗಿ ಅವರಿಗೆ ಕೊಡತಕ್ಕಂಥ ಒಂದು ಹಿಡಿ ಅನ್ನವನ್ನು ಸಹಿತ ಮಾರಾಟ ಮಾಡುತ್ತಿದ್ದಾರೆ. ಆ ಜೈಲುಗಳಬಳಿ ಬೀಡಿ, ಗಾಂಜ, ಅಫೀಮು ಇಗ್ಯೆರೆ ಅಲ್ಲಿ ಏನುಬೇಕಾದರೂ ಸಿಕ್ಕುತ್ತದೆ. ಹೀಗೆ ಅವರು ಈ ದಿವಸ ತಮಗೆ ಸಿಕ್ಕ ತಕ್ಕ ಆ ಅಲ್ಪಸ್ವಲ್ಪ ಅನ್ನವನ್ನು ಕೂಡ ಈ ಬೀಡಿಗಾಗಿ ಮಾರಿ ಸಾಯುತ್ತಿದ್ದಾರೆ. ಈ ಒಂದು ದೃಷ್ಟಿಯಿಂದ ಅವರು ಪುನಃ ಬೀಡಿಗಳನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಅದನ್ನು ಇನ್ನೂ ಕೊಟ್ಟಿಲ್ಲ. ಇದನ್ನು ಪರಿಶೀಲನೆಮಾಡುವುದು ಒಳ್ಳೆಯದು. ಮೊದಲು ಬೀಡಿಗಳನ್ನು ಕೊಡುತ್ತಿದ್ದಾಗ ಅವರು ಕೈತೋಟ–ಇತ್ಯಾದಿಗಳ ಕೆಲಸಕಾರ್ಯಗಳನ್ನು ಬಹಳ ಆಸಕ್ತಿಯಿಂದ ಚೆನ್ನಾಗಿ ಮಾಡಿಕೊಂಡು ಹೋಗುತ್ತಿದ್ದರು. ಆದುದರಿಂದ ಈ ಸಂದರ್ಭದಲ್ಲಿ ಅವರಿಗೆ ಪುನಃ ಈ ಬೀಡಿಗಳನ್ನು ಕೊಡತಕ್ಕದ್ದನ್ನೂ ಕೂಡ ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮತ್ತೆ, ಕೆಲವರು ಅವರ ಬಡುಗಡೆ ಆಗಬೇಕೆಂದು ಕೇಳುತ್ತಿದ್ದಾರೆ. ಈ ಅಂಶವನ್ನೂ ಸಹ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಪೆರೋಲ್ ಮೇಲೆ ರಿಲೀಜ್ ಮಾಡತಕ್ಕಂಥ ಕಾನೂನನ್ನು ಸ್ವಲ್ಪ ಲಿಬರಲೈಜ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಈ ಜೈಲುಗಳ ಸುಧಾರಣೆ ಆಗಬೇಕು, ಇದು ಅತ್ಯಗತ್ಯ ಎನ್ನತಕ್ಕದ್ದರ ಬಗ್ಗೆ ಕೆಲವು ಪ್ರಶ್ನಾವಳಿಗಳನ್ನೂ ಕೂಡ ನಾನು ಕಳುಹಿಸಿದ್ದೆನು. ಆದರೆ ಈಗತಾನೆ ಮಾತನಾಡಿದ ಮಿತ್ರರು "ನೀವು ಜೈಲುಗಳಿಗೆ ಹೋಗಿದ್ದೀರಾ" ಎಂದು ಕೇಳಿದರು. ನಾನು ಅನೇಕ ಸಲ ಜೈಲಿಗೆ ಹೋಗಿದ್ದೇನೆ; ಅದನ್ನು ನೋಡಿಕೊಂಡೂ ಬಂದಿದ್ದೇನೆ. ಆದರೆ ಶ್ರೀ ಗೋಪಾಲಗೌಡರು ಈ ಜೈಲುಗಳ ಸುಧಾರಣೆಗಳ ಬಗ್ಗೆ ಮಾತನಾಡುತ್ತ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಆದರೆ ನಾನು ಈಗ ಅವರು ಮಾಡಿದ ಭಾಷಣವನ್ನು ಕೇಳಿದೆನು. ಆದರೆ ಅವರು ಈ ಸುಧಾರಣೆಗಳ ಬಗ್ಗೆ ಇನ್ನೂ ಉತ್ತಮ ದರ್ಜೆಯಲ್ಲಿ ಟೀಕೆ ಮಾಡಬೇಕಾಗಿತ್ತು ಎಂದು ನನಗೆನ್ನಿಸುತ್ತಿದೆ. ಆದರೆ ಹಾಗೆ ಮಾಡದೆ ಅವರಿಗೆ ಜೈಲನಲ್ಲಿ ಹೆಂಡಕೊಡಿ, ಬೀಡಿಕೊಡಿ ಎಂದು ಹೇಳುತ್ತಿರುವುದು ನನಗೇನೋ. . . .

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಹೆಂಡ ಕುಡಿಯಬೇಕೆಂದು ಹೇಳಲಿಲ್ಲ.

ಶ್ರೀ ಜಿ. ಶಿವಪ್ಪ.—ಅದಕ್ಕೂ ಇದಕ್ಕೂ ಹೋಲಿಸಿದರೆ, ಹೆಚ್ಚು ಕಡಮೆ ದರ್ಜೆ ಒಂದೇ. ನಾನು ಹೇಳುವುದಿಷ್ಟು. . . .

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಸದಸ್ಯರು ಉತ್ತಮಬಾದ ದರ್ಜೆಯ ಸಲಹೆಯನ್ನು ಕೊಡಬಹುದಲ್ಲ.

ಶ್ರೀ ಜಿ. ಶಿವಪ್ಪ.—ನಮ್ಮ ಸರ್ಕಾರ ಬಂದಮೇಲೆ ಬಹಳ ಸದುದ್ದೇಶದಿಂದ ಬೀಡಿಯನ್ನು ತಪ್ಪಿಸಿದ್ದಾರೆ. ನಾನು ಸೆಂಟ್ರಲ್ ಜೈಲನ್ನು ನೋಡಿಕೊಂಡು ಬಂದಿದ್ದೇನೆ. ಚಿತ್ರದುರ್ಗದ ಜೈಲಿಗೆ ವಿಜಿಟರ್ ಕೂಡ ಆಗಿದ್ದೆ. ಈ ಸಭೆಯ ಸದಸ್ಯನಾಗಿ ಎಷ್ಟು ತಿಳಿದುಕೊಳ್ಳಬೇಕೋ ಅಷ್ಟು ತಿಳಿದುಕೊಂಡಿದ್ದೇನೆ. ಕಾಂಗ್ರೆಸ್ ಸರ್ಕಾರ ಬಂದಮೇಲೆ ಅನೇಕ ಸುಧಾರಣೆಗಳನ್ನು ಮಾಡಿದ್ದಾರೆ. ಸೆಂಟ್ರಲ್ ಜೈಲನಲ್ಲಿ ಅನೇಕ ಗೃಹ ಕೈಗಾರಿಕೆಗಳನ್ನು ಏರ್ಪಾಡು ಮಾಡಿದ್ದಾರೆ. ಅಲ್ಲದೆ ನಾವು ನಿತ್ಯವೂ ನೋಡುತ್ತಿದ್ದೇವೆ, ವಿಧಾನ ಸೌಧದಲ್ಲಿ ಮುನ್ನೂರು ನಾನೂರು ಜನ ಖೈದಿಗಳಿಂದ ಕೆಲಸ ಮಾಡಿಸಿ ದುಡಿತವನ್ನು ಕಲಸುತ್ತಿದ್ದಾರೆ. ಇಂಥ ಸುಧಾರಣೆಗಳನ್ನು ಮಾಡಬೇಕಾದುದು ಅತ್ಯಗತ್ಯ. ದೊಡ್ಡ ತತ್ವಜ್ಞಾನಿಗಳು ಹೇಳಿದ್ದಾರೆ: ತಪ್ಪು ಮಾಡುವುದು ಹುಟ್ಟುಗುಣವಲ್ಲ, ಸನ್ನಿವೇಶ ಸಂಪರ್ಕದಿಂದ ತಪ್ಪು ಮಾಡುತ್ತಾರೆ, ಮನಸ್ಸಿನ ದೌರ್ಬಲ್ಯದಿಂದ ತಪ್ಪು ಮಾಡುತ್ತಾರೆ ಎಂದು ಕೇಳಿದ್ದಾರೆ.

ತಪ್ಪಿತಸ್ಥನಿಗೆ ಮರ್ಯಾದೆ ಸಿಕ್ಕುವೆದು ಕಠಿಣ ಕಂಡನೆಯಲ್ಲಿ. ಇಂಥ ಸನ್ನಿವೇಶವನ್ನು ತೆಗೆದು ಒಳ್ಳೆಯ ವಾತಾವರಣವನ್ನು ಕಲ್ಪಿಸಿದರೆ, ಅವಕಾಶ ಕಲ್ಪಿಸಿದರೆ ಒಳ್ಳೆಯವರಾಗುತ್ತಾರೆ. ಮುಂದೆ ತಪ್ಪುದಾರಿಗೆ ಹೋಗುವುದಿಲ್ಲ. ಸರ್ಕಾರದವರು ಇದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಕೆಲವು ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಅನೇಕ ಸುಧಾರಣೆಗಳನ್ನು ಮಾಡಿದ್ದಾರೆಂಬುದು ಗೊತ್ತಾಗುತ್ತದೆ. Minimum security prison ಮಾಡುವ ವಿಷಯವನ್ನೂ ತಿಳಿಸಿದ್ದಾರೆ. ಚನ್ನಪಟ್ಟಣದ ಹತ್ತಿರ ಮುನ್ನೂರು ನಾನೂರು ಎಕರೆ ಜಮೀನು ತೆಗೆದುಕೊಂಡು ಫಾರಂಮಾಡಿ ಅಲ್ಲಿಗೆ ಕೆಲವು ಖೈದಿಗಳನ್ನು ತೆಗೆದುಕೊಂಡು ಹೋಗಿ ಅವರಿಗೆ ವ್ಯವಸಾಯ, ಗೃಹ ಕೈಗಾರಿಕೆ ಮುಂತಾದವುಗಳಲ್ಲಿ ಶಿಕ್ಷಣ ಕೊಡಬೇಕೆಂಬ ಸದುದ್ದೇಶವನ್ನು ಸರ್ಕಾರದವರಿಟ್ಟುಕೊಂಡಿದ್ದಾರೆ. ಇದನ್ನು ಜಾಗ್ರತೆ ಜಾರಿಗೆತರಬೇಕೆಂದು ಪ್ರಾರ್ಥನೆ. ಸೆಂಟ್ರಲ್ ಜೈಲು ಮತ್ತು ಜಿಲ್ಲಾ ಜೈಲುಗಳಲ್ಲಿ ಇನ್ನೂ ಕೆಲವು ಸುಧಾರಣೆಗಳಾಗುವುದು ಅವಶ್ಯಕವೆಂಬುದನ್ನು ಮನಗಂಡಿದ್ದಾರೆ. ಖೈದಿಗಳಿಗೆ ಕೊಡುವ ಊಟದ ವಿಚಾರದಲ್ಲಿಯೂ, ನಮ್ಮ ಮಿತ್ರರು ಹೇಳಿದಂತೆ, ಕಂಟ್ರೋಲರ್ ಹೋಗಿರುವುದರಿಂದ ಹೆಚ್ಚು ಮಾಡಬೇಕೆಂಬುದನ್ನು ಪರಿಶೀಲನೆಮಾಡುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕಂಟ್ರಾಕ್ಟರುಗಳು ಮೋಸಮಾಡುತ್ತಿದ್ದಾರೆ. ವಿಜಿಟರುಗಳು ವಿಸಿಟಿಂಗಿಗೆ ಅಲ್ಲಿಗೆ ಹೋದ ದಿವಸ ಸರಿಯಾಗಿ ಕೊಡುತ್ತಾರೆ; ಮಿಕ್ಕ ದಿವಸಗಳಲ್ಲಿ ಹಾಗೆ ಮಾಡುವುದಿಲ್ಲ. ಈಗ ಕೊಟ್ಟಿರುವ ಅನುಕೂಲಗಳೇನೋ ನೂಕ್ಕ. ಮುಂದೆ ಹಣ ಖರ್ಚಾದರೂ ಚಿಂತೆಯಿಲ್ಲ; ಸುಧಾರಣೆಗಳನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

Work for prisoners in Jails

ಶ್ರೀ ಜಿ. ನಾರಾಯಣಗೌಡ (ಮುಳಬಾಗಲು—ಶ್ರೀನಿವಾಸಪುರ). —ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಜೈಲುಗಳ ಸಂಬಂಧವಾಗಿ ಸುಮಾರು ಹದಿನೈದು ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ನ್ಯಾಯವಾಗಿ ಜೈಲಿಗೆ ತಪ್ಪಿತಸ್ಥರನ್ನು ಹಾಕುವುದು ಬರಿಯ ಶಿಕ್ಷೆಕೊಡುವ ದೃಷ್ಟಿಯಿಂದ ಮಾತ್ರವಲ್ಲ. ಇದು ಶಿಕ್ಷಣವೂ ಆಗಬೇಕು. ಸೆಂಟ್ರಲ್ ಜೈಲಿನಲ್ಲಿರುವ ಖೈದಿಗಳನ್ನು ವಿಧಾನ ಸೌಧದಲ್ಲಿ ಕೆಲಸ ಮಾಡುವುದಕ್ಕೆ ಬಿಟ್ಟಿದ್ದಾರೆ. ಬೇರೆ ಜೈಲುಗಳಲ್ಲಿ ಅನೇಕ ಖೈದಿಗಳಿದ್ದಾರೆ; ಅವರಿಗೆ ಈ ರೀತಿ ಸೌಕರ್ಯ ಮಾಡಲು ಅವಕಾಶವಿಲ್ಲ. ಕೆಲಸ ಮಾಡುವುದರಿಂದ ಅವರ ಮನೋಭಾವ ಕೂಡ ಬದಲಾವಣೆಯಾಗುವ ಸಂಭವವಿದೆ. ನಾವು ನೋಡಿದ ಹಾಗೆ ಜೈಲುಗಳಲ್ಲಿರುವ ಖೈದಿಗಳು ಗುಂಪಾಗಿ ಸೇರಿಕೊಂಡು ತಾವು ಮುಂದೇನು ಮಾಡಬೇಕು ಎಂದು ಮತ್ತೆ ಜೈಲಿಗೆ ಬರುವ ವಿಚಾರವನ್ನೇ ಯೋಚನೆ ಮಾಡುತ್ತಿರುತ್ತಾರೆ. ಅವರಿಗೆ ಹೀಗೆ ಅವಕಾಶ ಕೊಡದೆ, ಅವರು ಗೃಹ ಕೈಗಾರಿಕೆಗಳಲ್ಲಿ ಶಿಕ್ಷಣ ಪಡೆದರೆ ಜೈಲಿನಿಂದ ಹೊರಗೆ ಹೋದಮೇಲೆ ಒಳ್ಳೆಯ ಪ್ರಜೆಗಳಾಗಿ ಬಾಳಲು ಅವಕಾಶವಿರುತ್ತದೆ ಮತ್ತು ಅವರ ಮನೋಭಾವ ಪರಿವರ್ತನೆಯಾಗುತ್ತದೆ. ಅವರ ಊಟ ಉಪಚಾರಕ್ಕೆ ಆಗುವ ಖರ್ಚನ್ನು ಕೂಡ ಅವರು ಸಂಪಾದನೆ ಮಾಡಿಕೊಳ್ಳಲು ಅವಕಾಶ ಮಾಡಬಹುದು. ಮುಂದೆ ಸಂಸಾರಿಗಳಾಗಬಹುದು. ಆರೋಗ್ಯವನ್ನು ಕೂಡ ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಳ್ಳಬಹುದು. ಈ ದೃಷ್ಟಿಯಿಂದ ದೊಡ್ಡ ದೊಡ್ಡ ಸಬ್ ಜೈಲುಗಳಲ್ಲಿಯೂ ಕೆಲಸವನ್ನೊದಗಿಸಿಕೊಡಬೇಕೆಂದು ನಮಹೆ ಮಾಡುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಜೈಲುಗಳಲ್ಲಿರತಕ್ಕ ಕ್ರಮಗಳು ಮತ್ತು ಅಲ್ಲಿ ಖೈದಿಗಳಾಗಿರುವವರ ನಡತೆ ಇವೆರಡೂ ಸರಿಹೋಗಬೇಕೆಂಬ ದರಲ್ಲಿ ನನಗೂ ಅವರಿಗೂ ಭಿನ್ನಾಭಿಪ್ರಾಯವಿಲ್ಲ. ಈಗಾಗಲೇ ಜೈಲುಗಳಲ್ಲಿ ಅನೇಕ ಸುಧಾರಣೆಗಳನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಇವುಗಳಲ್ಲಿ ಎರಡು ಮೂರು ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತೇನೆ. ರಾಮನಗರದ ಹತ್ತಿರ ಕುಂಬಾಪುರದಲ್ಲಿ ಒಂದು ಸ್ಥಳವನ್ನು ನೋಡಲಾಗಿದೆ. ಅಲ್ಲಿ ವ್ಯವಸಾಯದ ಕಾಲೋನಿ ಮಾದರಿಯಲ್ಲಿ ಏರ್ಪಾಡು ಮಾಡಿ ಕೆಲವು ಖೈದಿಗಳನ್ನು ಕಳುಹಿಸಬೇಕೆಂದು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಿದ್ದಾರೆ. ಇದಕ್ಕೆ ಮೇಲ್ಪಚಾರಣೆಗೆ ಸಮಿತಿಯನ್ನು ಏರ್ಪಾಡು ಮಾಡುವ ವಿಚಾರವನ್ನು ತೆಗೆದುಕೊಳ್ಳಬೇಕು. ಇವರಿಂದ ಎಷ್ಟುಮಟ್ಟಿಗೆ ಕೆಲಸವಾಗುತ್ತದೆ ಎಂದು ವರದಿ ಮಾಡುವುದಕ್ಕೆ ಏರ್ಪಾಡು ಮಾಡಿದೆ. ಆದಷ್ಟು ಜಾಗ್ರತೆ ಆಗಲು ಪ್ರಯತ್ನ ಮಾಡುತ್ತೇವೆ.

ಇದರ ಜೊತೆಗೆ ಶಿವಮೊಗ್ಗ ಜೈಲಿನ ಆವರಣದಲ್ಲಿ ನುತ್ತಲೂ ಬೇಕಾದಷ್ಟು ಜಮೀನಿದೆ. ಅಲ್ಲಿಯೂ ಖೈದಿಗಳಿಂದ ಏಕೆ ಕೆಲಸ ಮಾಡಿಸಬಾರದೆಂದು ಯೋಚಿಸಿ ಆ ಜಮೀನಿನ ಸುತ್ತಲೂ ತಂತಿ ಹಾಕಿಸುತ್ತಿದ್ದೇವೆ. ಇದರಲ್ಲಿ ಮುಖ್ಯವಾಗಿ ಕೆಲಸವನ್ನೊದಗಿಸಬೇಕೆಂಬುದು ಉದ್ದೇಶ. ಒಂದು ವಾದ ಬಂತು. ಬೆಂಗಳೂರು ಜೈಲಿನಲ್ಲಿರುವವರಿಗೆಲ್ಲ ಕೆಲಸವನ್ನೊದಗಿಸಬೇಕೆಂದು ಹೇಳಿದರು. ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಹೆಚ್ಚು ಜನರನ್ನು ಇಲ್ಲಿಂದ ತೆಗೆದು ಬಳ್ಳಾರಿಗೆ ಕಳುಹಿಸುವುದಕ್ಕಾಗುತ್ತದೆಯೆ ಎಂಬುದನ್ನು ಯೋಚಿಸುತ್ತಿದ್ದೇವೆ ಬೆಂಗಳೂರು ಜೈಲಿನಲ್ಲಿ ಒಂದು ಸಾವಿರ ಜನರಿರತಕ್ಕದ್ದು. Under trial prisoners 500 ಜನರಿದ್ದಾರೆ. ಇಲ್ಲಿನ ಜೈಲಿನಲ್ಲಿ 500 ಜನರಿರುವುದಕ್ಕೆ ಅವಕಾಶ ಮಾಡದೇಯಿದ್ದರೆ ಅಪಾಯವಾಗುತ್ತದೆಯೋ ಏನೋ ಎನ್ನಿಸುತ್ತದೆ. ಏಕೆಂದರೆ, ಸಮಾಜದಲ್ಲಿ ಅನೇಕ ಸನ್ನಿವೇಶಗಳು ಸಂಭವಿಸುತ್ತವೆ. ಆದಕಾರಣ ಬೆಂಗಳೂರಿನಲ್ಲಿ, ಅಥವಾ ಅದರ ಹತ್ತಿರದಲ್ಲಿ ಇಂಥ ಜೈಲಿರಬೇಕು. ಈ ಜೈಲನ್ನು ಬೇರೆ ಕಡೆ ಹಾಕಲು ಎರಡು ಮೂರು ಸ್ಥಳಗಳನ್ನು ನೋಡಿದೆವು. ಬದಲಾವಣೆ ಮಾಡಬೇಕಾದರೆ ಮೂವತ್ತು ನಲವತ್ತು ಲಕ್ಷ ರೂಪಾಯಿ ಖರ್ಚಾಗುತ್ತದೆ. ಆದುದರಿಂದ ಆದಷ್ಟು ಕಡಮೆ ಮಾಡಬೇಕು, ಉಳಿತಾಯವಾಗುವ ಜಾಗವನ್ನು ವಿಶ್ವವಿದ್ಯಾನಿಲಯಕ್ಕೆ ಕೊಡಬೇಕೆಂದು ಯೋಚನೆ ಮಾಡಿ ಈಗಾಗಲೇ ಹೆಂಗಸರಿದ್ದ ಭಾಗವನ್ನು ವಿಶ್ವವಿದ್ಯಾನಿಲಯಕ್ಕೆ ಕೊಡುವುದಕ್ಕೆ ಏರ್ಪಾಡು ಮಾಡಿದೆ.

ಎರಡನೆಯದಾಗಿ, ಒಂದು ವರ್ಷಕ್ಕೆ ಮೇಲ್ಪಟ್ಟು ಶಿಕ್ಷೆಗೆ ಒಳಗಾಗಿರುವ ಖೈದಿಗಳನ್ನು ಬಳ್ಳಾರಿಗೆ ಕಳುಹಿಸಬೇಕೆಂದು ಮಾಡಿದ್ದೇವೆ. ಕೈಗಾರಿಕೆ ಕನಬನ್ನು ಎಲ್ಲಾ ಜೈಲಿನಲ್ಲಿಯೂ ಇಡುವುದಕ್ಕೆ ಸಾಧ್ಯವಿಲ್ಲ. ಅದು economical ಅಥವಾ ರಾಭದಾಯಕವೂ ಆಗುವುದಿಲ್ಲ. ಸೆಂಟ್ರಲ್ ಜೈಲಿನಲ್ಲಿ ಅವಕಾಶವಿರುವುದರಿಂದ ಮತ್ತು trained men ಇರುವುದರಿಂದ ಸಾಧ್ಯವಾಗಿದೆ.

ಒಂದು ವರ್ಷಕ್ಕೆ ಮೇಲ್ಪಟ್ಟು ಶಿಕ್ಷೆಯಾಗಿರುವವರನ್ನು ಮಾತ್ರ ಬಳ್ಳಾರಿಗೆ ಕಳುಹಿಸಬೇಕು. ಇದಕ್ಕಿಂತ ಕಡಮೆ ಇರುವವರನ್ನು ಕಳುಹಿಸಿದರೆ uneconomical ಆಗುತ್ತದೆ. ಅಂತೂ ಇಲ್ಲಿರತಕ್ಕ ಖೈದಿಗಳ ಸಂಖ್ಯೆಯನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇನ್ನು ಖೈದಿಗಳಿಗೆ ಕೆಲವು ರಿಯಾಯ್ತಿಗಳು ಅತ್ಯಗತ್ಯವೆಂದು ಹೇಳಿದರು. ಶ್ರೀಮಾನ್ ಗೋಪಾಲಗೌಡರು ಆಹಾರದ ಪ್ರಮಾಣವನ್ನು ಹೆಚ್ಚಿಸಬೇಕೆಂದು ಹೇಳಿದರು. 16 ಔನ್ಸ್‌ನಷ್ಟು ಕೊಡುತ್ತಿದ್ದುದನ್ನು 18 ಔನ್ಸ್ ಮಾಡಿದೆ. Two ounces of ragi flour per head is being given. ಅವಶ್ಯಕತೆ ಬಿದ್ದರೆ ಇದನ್ನು ಮತ್ತೆ ಪರಿಶೀಲಿಸೋಣ. ಅವರಿಗೆ ಆಹಾರವನ್ನು ಕಡಮೆ ಮಾಡಬೇಕೆಂಬುದು ಸರ್ಕಾರದ ಉದ್ದೇಶವಲ್ಲ. ಎರಡು ಔನ್ಸ್ ಹೆಚ್ಚು ಮಾಡಿರುವುದನ್ನು ಪರಿಶೀಲನೆ ಮಾಡಿ, ಇನ್ನೂ ಹೆಚ್ಚು ಮಾಡುವುದಕ್ಕೆ ಅಭ್ಯಂತರವಿಲ್ಲ.

ರೆಮಿಷನ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಬೊನ್ನೆ ಒಂದು ಕೇಸು ಬಂತು. ಅದರಲ್ಲಿ ಅಪರಾಧಿಗೆ ಜೀವಾವಧಿ ಶಿಕ್ಷೆಯಾಗಿತ್ತು. ಇದುವರೆಗೆ ಇಟ್ಟಿರುವುದೂ ಸೇರಿ 12 ವರ್ಷವಾಗಿತ್ತು, ಇನ್ನೂ 9 ವರ್ಷ ಬಾಕಿ ಇತ್ತು, ಇದನ್ನು ರೆಮಿಷನ್ ಮಾಡಬೇಕೆಂಬ ಸಲಹೆ ಬಂತು. ಸಶ್ರಮ ಜೀವಾವಧಿ ಶಿಕ್ಷೆ ಮಾಡುವುದರಿಂದ, it has a deterrent effect on society. Suppose we let them loose on society, what would be the effect ಎಂಬುದನ್ನು ಯೋಚನೆ ಮಾಡಬೇಕು. ಇಂಥ ಶಿಫಾರಸುಗಳನ್ನು ಮಾಡಿದರೆ ಬಹಳ ಕಷ್ಟ. ಒಂದು ಉದಾಹರಣೆ ಮಾತ್ರ ಹೇಳುತ್ತಿದ್ದೇನೆ, ಇನ್ನೂ ಅನೇಕವಾಗಿವೆ. ಏನೋ ನಾಲ್ಕೈದು ತಿಂಗಳಾದರೆ ರೆಮಿಷನ್ ಕೊಟ್ಟರೂ ಚಿಂತೆಯಿಲ್ಲ. ಆದರೆ ಹೆಚ್ಚು ಕೊಡಬೇಕೆಂದರೆ, ಯೋಚನೆ ಮಾಡಬೇಕು.

ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. Death sentence ಆಗಿರುವ ಒಂದು ಕೇಸು

ಬಂದಿತ್ತು. ಅಪೀಲು ಮಾಡಿಕೊಳ್ಳಲು ಅವಕಾಶ ವಿಲ್ಲದೆ ಅವರಿಗೆ ತೊಂದರೆಯಾಗಿತ್ತು. ಕೊನೆಗೆ Death sentence execute ಆಗಬೇಕಾದ ಸಂದರ್ಭ ಬಂದದ್ದರಿಂದ, ಸಂಬಂಧಪಟ್ಟ ಕಾಗದ ಪತ್ರಗಳನ್ನು ನೋಡಿದಾಗ ಒಂದು ಅವಕಾಶವಿರು ವಂತೆ ಕಂಡುಬಂತು. I am just giving an illustration. We sent it to the President and fortunately the death sentence was commuted. So Government is very careful ಎನ್ನುವ ವಿಷಯ ಮಾತ್ರ ಹೇಳುತ್ತಿದ್ದೇನೆ. We are applying our minds and we are trying our best. ಅವರಿಗೆ ತೊಂದರೆ ಕೊಡುವ ಉದ್ದೇಶವಿಲ್ಲ. ಅವರು ಮಾರ್ಪಾಡಾಗಬೇಕು; ಅಲ್ಲದೆ ಅವರು ಸಮಾಜಕ್ಕೆ ಪಾಪವು ಬರುವುದರಿಂದ ಸಮಾಜಕ್ಕೆ ತೊಂದರೆ ಯಾಗಬಾರದು. ಈ ಎರಡು ದೃಷ್ಟಿಗಳಿಂದಲೂ ಪ್ರಯತ್ನ ಮಾಡುತ್ತಿದ್ದೇವೆ. . . .

ಶ್ರೀ ಎಸ್. ಗೋಪಾಲಗೌಡ.—ಸಮಿತಿಯವರಿಂದ ಶಿಫಾರಸಾಗಿರುವವರಿಗಾದರೂ. . . .

ಶ್ರೀ ಎ. ಜಿ. ರಾಮಚಂದ್ರರಾವ್.—ಸಮಿತಿಯ ವರಿಗೆ ಗೊತ್ತಿಲ್ಲದೇಇರುವ ವಿಷಯಗಳೂ ಇರುತ್ತವೆ. It is better that it is left to the discretion of the Government. ಅವರನ್ನು ಬಿಡುವುದರಿಂದ ಅಪಾಯವಿಲ್ಲವೆಂದು ಕಂಡುಬಂದರೆ ಬಿಡುತ್ತಾರೆ, ಅಭ್ಯಂತರವಿಲ್ಲ.

'ಪೆರೋಲ್' ವಿಷಯದಲ್ಲಿಯೂ ಹೀಗೆಯೇ. ಅವರು ಹೊರಗೆ ಹೋಗುವುದರಿಂದ ಸಮಾಜಕ್ಕೆ ತೊಂದರೆ ಯಿಲ್ಲವೆ, ಹಿಂದೆ ಯಾರು ಅವರ ಮೇಲೆ ಅಪಾದನೆ ಮಾಡಿದ್ದಾರೋ ಅವರಿಗೆ ತೊಂದರೆಯಿಲ್ಲವೆ ಎಂಬು ದನ್ನು ನೋಡಿ ತೀರ್ಮಾನ ಮಾಡಬೇಕಾಗುತ್ತದೆ. ಹೀಗೆ ವೈಯಕ್ತಿಕ ಸಂದರ್ಭಗಳಿಗೆ ಪೂರ್ಣ ಗಮನ ಕೊಡುತ್ತಿದ್ದೇವೆ ಎಂಬುದನ್ನು ವಿನಂತಿ ಮಾಡಿಕೊಳ್ಳು ತ್ತಿದ್ದೇನೆ.

ಮತ್ತೊಂದು ವಿಚಾರವೆಂದರೆ, ಬೀಡಿಯ ವಿಚಾರ. ಅವರು ಸಂಪಾದನೆ ಮಾಡತಕ್ಕ ಹಣದಲ್ಲಿ ಅವರು ಇದನ್ನು ತೆಗೆದುಕೊಳ್ಳುವುದರಲ್ಲಿ ನಮ್ಮ ಅಭ್ಯಂತರ ವಿಲ್ಲ. ಸರ್ಕಾರದವರು ಖೈದಿಗಳಿಗೆ ಬೀಡಿ ಒದಗಿಸ ಬೇಕಾದರೆ ವರ್ಷಕ್ಕೆ 20 ಸಾವಿರ ರೂಪಾಯಿ ಖರ್ಚಾ ಗುತ್ತದೆ. ಆದಕಾರಣ ಇದು ಸಾಧ್ಯವಿಲ್ಲ.

Sri S. GOPALA GOWDA.—Jails have never spent 20,000 rupees per year on this item in any previous year.

5 P.M.

ಶ್ರೀ ಎ. ಜಿ. ರಾಮಚಂದ್ರರಾವ್.—1951ನೆಯ ಇಸವಿಯಲ್ಲಿ ಐದು ಸಾವಿರ ಖರ್ಚಾಗಿತ್ತು. ಹನನಾದ ಬೀಡಿಗಳನ್ನು ಕೊಡಬೇಕಾದರೆ 20 ಸಾವಿರ ರೂಪಾಯಿ ಆಗುತ್ತದೆಂದು ವರದಿ ಬಂದಿದೆ. ಅವರು ಸಂಪಾದನೆ ಮಾಡುವುದರಲ್ಲಿ ತೆಗೆದುಕೊಳ್ಳುವುದಕ್ಕೆ ಅಭ್ಯಂತರ ನಮ್ಮದೇನೂ ಇಲ್ಲ.

ಇಷ್ಟು ಹೇಳಿದ ಮೇಲೆ, ದಯವಿಟ್ಟು ಬೋತಾ ನಿರ್ಣಯವನ್ನು ಪಾಪನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The question is :

> "that a sum not exceeding Rs. 15,09,000 be granted to the Government to defray the charges which will come in course of payment during the year ending 31st day of March 1956, in respect of 'Jails and Convict Settlements'."

The motion was adopted.

Mr. SPEAKER.—The House will now rise for the day and meet at 12 o'clock tomorrow.

The House adjourned at Two Minutes past Five of the Clock to meet again at Twelve of the Clock on Wednesday, the 16th March 1955.

WD 4508—GPB—550—3-6-55